24 ಸೆಪ್ಟೆಂಬರ್ 2025 ಬುಧವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 195 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಜನಮನದ ದನಿ

# ಪ್ರಜೋದಯ

ದಿನಪತ್ರಿಕೆ

ಸಂಪಾದಕ : ಜೆ.ಆರ್. ಕೆಂಚೇಗೌಡ



ಆಸ್ಟ್ರೇಲಿಯಾ ವಿರುದ್ಧ ನಡೆಯಲಿರುವ ಆ್ಯಷಸ್ ಸರಣಿಗೆ ಇಂಗ್ಲೆಂಡ್ ತಂಡವನ್ನು ಮಂಗಳವಾರ ಪ್ರಕಟಿಸ ಲಾಗಿದೆ. ಬೆನ್ ಸ್ಟೋಕ್ ತಂಡದ ನಾಯಕತ್ವ ವಹಿಸಲಿದ್ದಾರೆ.




ತಕ್ಕ ರೀತೀಲಿ ಕಲಿಸಿದ್ರೆ ಲೆಕ್ಕ ಬಿಡ್ತೋದೂ ಯಾವ ಲೆಕ್ಕ ? » 2



ಜನ ಸಂದಣಿ ನಿಯಂತ್ರಣ ಮಸೂದೆ : ಪರಿಶೀಲನೆಗೆ 11 ಸದಸ್ಯರ ಸಮಿತಿ » 3



ಸಮೀಕ್ಷೆಯಲ್ಲಿ ಕ್ರಿಶ್ಚಿಯನ್ ಪದ ತೆಗೆಯಲು ಬಿಜೆಪಿ ಒತ್ತಾಯ » 4


# ಭೌತಿಕ-ಹಣಕಾಸು ಅಂಕಿ ಅಂಶಗಳಷ್ಟೇ ಅಭಿವೃದ್ಧಿಯೇ

## ಕೆಡಿಪಿ ಸಭೆಯಲ್ಲಿ ತೌಡು ಕುಟ್ಟುವ ಕೆಲಸವಾಗದಿರಲಿ | ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಎಚ್ಚರಿಕೆ

• ಪ್ರಜೋದಯ ವರದಿ

**ಹಾಸನ:** ಜನರ ಸಮಸ್ಯೆ ಬಗೆಹರಿಸುವ ಕೆಲಸ ವಾಗುತ್ತಿಲ್ಲ. ಹಣ ಎಷ್ಟು ಬಿಡುಗಡೆಯಾಗಿದೆ, ಎಷ್ಟು ಖರ್ಚಾಗಿದೆ ಎಂಬುದಷ್ಟನ್ನೇ ಪುಸ್ತಕದಲ್ಲಿ ಬರೆದು ಬಿಟ್ಟರೆ ಅದು ಪ್ರಗತಿಯೇ...ಕೆಡಿಪಿ ಎಂದರೆ ಏನರ್ಥ... ಎಷ್ಟು ಜನರಿಗೆ ಗೊತ್ತು ಎಂದು ಜಿಲ್ಲಾ ಉಸ್ತುವಾರಿ ಕೃಷ್ಣಬೈರೇಗೌಡ ಅವರು ಅಧಿಕಾರಿಗಳನ್ನು ತರಾಟೆಗೆ ತೆಗೆದು ಕೊಂಡರು.

ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗ ಣದಲ್ಲಿ ಮಂಗಳವಾರ ನಡೆದ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯ ಪ್ರಾರಂಭದಲ್ಲೇ ಅಧಿ ಕಾರಿಗಳ ಕಾರ್ಯವೈಖರಿ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಅವರು, ಭೌತಿಕ-ಹಣಕಾಸು ಅಂಕಿ-ಅಂಶಗಳಷ್ಟೇ ಅಭಿವೃದ್ಧಿಯೇ. ಬಂದ ಅನುದಾನ ಖರ್ಚು ಮಾಡುವುದನ್ನೇ ಅಭಿ ವೃದ್ಧಿ ಎಂದುಕೊಂಡಿದ್ದೀರಾ. ಫೋಟೋ ತೆಗೆ ಸಿಕೊಂಡು ಕಾರ್ಯಕ್ರಮ ಮಾಡಿದ್ದೇವೆಂದು ಹೇಳುತ್ತೀರಿ. ನಾನು ಕೇಳಿದ ಪ್ರಶ್ನೆಗೆ ನೇರವಾಗಿ ಉತ್ತರ ಕೊಡಿ, ಸುತ್ತಿ ಬಳಸಿ ಹಾರಿಕೆ ಉತ್ತರ ಕೊಡುವುದು ಬೇಡ. ಗಿರಕಿ ಹೊಡೆಸಲು ಹೋದರೆ ನನಗೂ ಒಳ್ಳೆಯದಲ್ಲ, ನಿಮಗೂ ಒಳ್ಳೆಯದಲ್ಲವೆಂದು ಎಚ್ಚರಿಕೆ ನೀಡಿದರು.



ಸ್ಥಳೀಯ ಜನಪ್ರತಿನಿಧಿಗಳ ಸಹಕಾರವಿದ್ದರೆ ಆಯ್ದ ಇಲಾಖೆ, ಆದ್ಯತೆಯ ಕಾರ್ಯ ಕ್ರಮಗ ಳನ್ನು ಯಶಸ್ವಿಗೊಳಿಸಬಹುದು. ಇಲ್ಲದಿದ್ದರೆ ಕೆಡಿಪಿ ಸಭೆ ಕೂಡ ತೌಡು ಕುಟ್ಟುವ ಕಾರ್ಯ ಕ್ರಮವಾಗುತ್ತದೆ. ಸರ್ಕಾರದ ಕಾರ್ಯಕ್ರಮ ಗಳಿಂದ ಜನರಿಗೆ ಆಗುತ್ತಿರುವ ಪ್ರಯೋಜನ ಗಳೇನು, ಜನರ ಜೀವನದಲ್ಲಿ ಸಾಸಿವೆ ಕಾಳಿ ನಷ್ಟಾದ್ರೂ ಲಾಭವಾಗಿದೆಯೇ ಎಂಬ ಮಾಹಿತಿ ಯಷ್ಟೇ ನನಗೆ ಮುಖ್ಯ. ಪುಸ್ತಕದಲ್ಲಿರುವ ಅಂಕಿ-ಅಂಶಗಳು ನನಗೆ ಬೇಕಿಲ್ಲ. ತೆರಿಗೆದಾರ ಜನರಿಗೆ ಎಷ್ಟು ಪ್ರಯೋಜನವಾಯ್ತು, ಲಾಭ ವಾಯ್ತು ಎಂಬ ಕಲ್ಪನೆಯೇ ಅಧಿಕಾರಿಗಳಿಗೆ ಇಲ್ಲವೆಂದು ಅಸಮಾಧಾನ ವ್ಯಕ್ತಪಡಿಸಿದರು.

**ಕಾಟಾಚಾರದ ಉತ್ತರ ಬೇಡ**

ಜಿಲ್ಲೆಯಲ್ಲಿ 18 ಸಾವಿರ ಕುಟುಂಬಗಳ ಹೆಸರಲ್ಲಿ ಬಿಪಿಎಲ್ ಪಡಿತರ ಚೀಟಿ ಇದ್ದರೂ ಸತತ ಮೂರು ತಿಂಗಳು ಪಡಿತರವನ್ನು ಏಕೆ ಪಡೆದಿಲ್ಲ, ಅಧಿಕಾರಿಗಳು ಏಕೆ ಸ್ಥಳ ಪರಿಶೀಲನೆ ನಡೆಸಿಲ್ಲ, ಇಷ್ಟು ಜನರು ಪಡಿತರ ಪಡೆದು ಕೊಳ್ಳದೇ ಇರುವುದಕ್ಕೆ ಕಾರಣವೇನೆಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪನಿರ್ದೇಶಕ ಅರುಣ್ ಸಂಗಾವಿ ಅವರನ್ನು ಪ್ರಶ್ನಿಸಿದರು.

ಪ್ರತಿಕ್ರಿಯಿಸಿದ ಅರುಣ್ ಅವರು, ಅವರೆಲ್ಲರೂ ಬೇರೆ ಊರುಗಳಿಗೆ ವಲಸೆ

» ನಾಲ್ಕನೇ ಪುಟದಲ್ಲಿ

**ಸಚಿವರಿಂದ ರಾತ್ರಿ 8.15ರವರೆಗೆ ಸಭೆ**

ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ಮಂಗಳವಾರ ಬೆಳಿಗ್ಗೆ 10.30ಕ್ಕೆ ಆರಂಭವಾದ ಕೆಡಿಪಿ ಸಭೆ ರಾತ್ರಿ 8.15ರ ವರೆಗೆ ನಡೆಯಿತು. ಸಚಿವ ಕೃಷ್ಣಬೈರೇಗೌಡ ಅವರು ಸಭೆಯಲ್ಲಿ ಎಲ್ಲಾ ಇಲಾಖೆಯ ಅಭಿವೃದ್ಧಿ ಪರಿಶೀಲಿಸಿ, ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿ ಅಧಿಕಾರಿಗಳಿಗೆ ಹಲವು ಸೂಚನೆ ಹಾಗು ಗುರಿಗಳನ್ನು ನಿಗದಿಪಡಿಸಿದರು. ಈ ಹಿಂದೆ ಸೆ.6ರಂದು ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ನಡೆದ ಜನಸಂಪರ್ಕ ಸಭೆಯಲ್ಲೂ ರಾತ್ರಿ 8 ಗಂಟೆವರೆಗೂ ಅಹವಾಲು ಸ್ವೀಕಾರ ಮಾಡುವ ಮೂಲಕ ಗಮನ ಸೆಳೆದಿದ್ದರು.

**ಪ್ರಾಯೋಗಿಕವಾಗಿ ಕೆಲಸ ಮಾಡಿ**

ಕೃಷಿ ಇಲಾಖೆಯ ಕಾರ್ಯಗಳು ಕೇವಲ ಕಡತಗಳಲ್ಲಿ ಉಳಿಯ ಬಾರದು, ಬದಲಾಗಿ ರೈತರ ಜಮೀನುಗಳಲ್ಲಿ ಕಾರ್ಯರೂಪಕ್ಕೆ ಬರಬೇಕು. ಅಧಿಕಾರಿಗಳು ಕಚೇರಿ ಯಲ್ಲಿ ಕುಳಿತು, ಬ್ಯಾನರ್ ಹಿಡಿದು ಫೋಟೋ ತೆಗೆಸಿಕೊಳ್ಳುವುದನ್ನೇ ಜಾಗೃತಿ ಎಂದುಕೊಳ್ಳುತ್ತಾರೆ. ಇದು ರೈತರಿಗೆ ಯಾವುದೇ ಸಹಾಯ ಮಾಡುವುದಿಲ್ಲ. ರೈತರ ಬಳಿ ನೇರವಾಗಿ ಹೋಗಿ ಮಾಹಿತಿ ನೀಡಿ. ಬೀಜೋಪಚಾರ ಮತ್ತು ಬೆಳೆ ಪರಿವರ್ತನೆ ಬಗ್ಗೆ ರೈತರಿಗೆ ವೈಜ್ಞಾನಿಕ ಮಾಹಿತಿ ನೀಡುವಂತೆ ತಾಕೀತು ಮಾಡಿದರು.

**ನಿಮ್ಮ ಕೈ ಯಾರಾದ್ರೂ ಕಟ್ಟಿಹಾಕಿದ್ದಾರಾ**

ರೈತರಿಂದ ಹಾಲು ಖರೀದಿಸುವ ಖಾಸಗಿ ಕಂಪೆನಿಗಳು 5 ರೂ. ಲಾಭದ ಮಾರ್ಜಿನ್‌ನಲ್ಲಿ ಕೆಲಸ ಮಾಡುತ್ತೆ. ಆದರೆ, ಸರ್ಕಾರದ ನೆರವು ಪಡೆದ ಸಹಕಾರಿ ಡೇರಿಗಳು 20 ರೂ. ಮಾರ್ಜಿನ್ ಇಟ್ಟರೂ ನಷ್ಟದಲ್ಲಿವೆ ಎಂದರೆ ಏನರ್ಥ. ನಿಮ್ಮಿಂದಾ ಗುತ್ತಿರುವ ನಷ್ಟ ರೈತರಿಗೆ ಹೊರೆ ಯಾಗುತ್ತಿದೆ. ಖಾಸಗಿಯವರಿಗಿಂತ ಐದು ಪಟ್ಟು ಹೆಚ್ಚು ಸಿಬ್ಬಂದಿ ಇದ್ದರೂ ಡೇರಿಗಳಲ್ಲಿ ಹಾಲು ಮಾರಾಟ ಮಾಡಲು ಏನು ಸಮಸ್ಯೆ, ನಿಮ್ಮ ಕೈಯನ್ನು ಯಾರಾದ್ರೂ ಕಟ್ಟಿಹಾಕಿದ್ದಾರಾ, ಅಸಲಿಗೆ ಸರ್ಕಾರ ಸಬ್ಸಿಡಿ ಕೊಡುತ್ತಿರುವುದು ರೈತರಿಗಲ್ಲ, ನಿಮ್ಮ ಖರ್ಚು-ವೆಚ್ಚಗಳಿಗೆ ಎಂದು ಪಶುಸಂಗೋಪನಾ ಇಲಾಖೆ ಅಧಿಕಾರಿ, ಹಾಲು ಒಕ್ಕೂಟದ ಅಧಿಕಾರಿಯನ್ನು ತರಾಟೆಗೆ ತೆಗೆದುಕೊಂಡರು.

# ಸ್ವಾತಂತ್ರ್ಯ ಹೋರಾಟಗಾರ ಹೆಚ್.ಎಂ.ಶಿವಣ್ಣ ನಿಧನ

## ಇಂದು ಬಳದರೆಯಲ್ಲಿ ಅಂತ್ಯಕ್ರಿಯೆ

• ಪ್ರಜೋದಯ ವರದಿ

**ಹಾಸನ:** ವಯೋಸಹಜ ಕಾಯಿಲೆ ಯಿಂದ ಬಳಲುತ್ತಿದ್ದ ಸ್ವಾತಂತ್ರ್ಯ ಹೋರಾಟಗಾರ ಹೆಚ್.ಎಂ.ಶಿವಣ್ಣ (94) ಅವರು ಮಂಗಳವಾರ ನಗರದ ಖಾಸಗಿ ಆಸ್ಪತ್ರೆಯಲ್ಲಿ ಕೊನೆಯುಸಿ ರೆಳೆದಿದ್ದಾರೆ.

ಹಲವು ದಿನಗಳಿಂದ ಅನಾರೋಗ್ಯ ದಿಂದ ಬಳಲುತ್ತಿದ್ದ ಅವರು, ನಗರದ ಜನಪ್ರಿಯ ಆಸ್ಪತ್ರೆಯಲ್ಲಿ ಚಿಕಿ ತ್ಸೆ ಪಡೆಯುತ್ತಿದ್ದರು. ಮೃತರಿಗೆ ಪತ್ನಿ ಸುಶೀಲಮ್ಮ, ಇಬ್ಬರು ಗಂಡು ಮಕ್ಕಳು ಇದ್ದಾರೆ. ಬುಧವಾರ ಚನ್ನರಾಯ ಪಟ್ಟಣ ತಾಲ್ಲೂಕಿನ ಬಳದರೆ ಸಮೀಪದ ಅವರ ತೋಟದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

**ಗಡಿ ಜಿಲ್ಲೆಯಿಂದ ಹಾಸನಕ್ಕೆ**

ಮೂಲತಃ ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕಿನ ಹಂಗಳ ಗ್ರಾಮದವರಾದ ಹೆಚ್.ಎಂ.ಶಿವಣ್ಣ ಅವರು, ಸ್ವಾತಂತ್ರ ಹೋರಾಟದ ವೇಳೆ ಪರಿಚಿತರಾದ ಹಾಸನ ಕ್ಷೇತ್ರದ



ಮಾಜಿ ಶಾಸಕರಾದ ಯಶೋಧರಾ ದಾಸಪ್ಪ ಅವರೊಂದಿಗೆ ಹಾಸನಕ್ಕೆ ಆಗಮಿಸಿ, ಕಳೆದ ಏಳುದಶಕಗಳಿಂದ ಜಿಲ್ಲೆಯಲ್ಲೇ ನೆಲೆಸಿದ್ದಾರೆ.

1933 ಮಾರ್ಚ್1 ರಂದು ಹೆಚ್. ಮಂಟೇಗೌಡ ಮತ್ತು ತಿಮ್ಮಮ್ಮ ಅವರ ಪುತ್ರರಾದ ಶಿವಣ್ಣ ಅವರು, ತಮ್ಮ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣವನ್ನು ಗುಂಡ್ಲುಪೇಟೆಯಲ್ಲಿ ಪಡೆದರು. ಇಂಟರ್ ಮೀಡಿಯೇಟ್ ಅನ್ನು ಮೈಸೂರಿನ ಯುವರಾಜ

» ನಾಲ್ಕನೇ ಪುಟದಲ್ಲಿ

# ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಾಮಗಾರಿಗೆ 63.34 ಕೋ.ರೂ.


## ಪರಿಷ್ಕೃತ ಅನುದಾನಕ್ಕೆ ಸರ್ಕಾರ ಅನುಮೋದನೆ : ಕೃಷ್ಣಬೈರೇಗೌಡ

• ಪ್ರಜೋದಯ ವರದಿ

**ಹಾಸನ:** ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಹಿಮ್ಸ್) ಆವ ರಣದಲ್ಲಿ ನಿರ್ಮಾಣವಾಗುತ್ತಿರುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡ ಕಾಮಗಾರಿಗೆ ಸರ್ಕಾರ ಪರಿಷ್ಕೃತ ಅಂದಾಜು ಮೊತ್ತವನ್ನು 63.34 ಕೋ.ರೂ.ಗೆ ಹೆಚ್ಚಿಸಿ ಆಡಳಿತಾತ್ಮಕ ಅನುಮೋದನೆ ನೀಡಿದೆ.

ಈ ಹಿಂದೆ ಕಾಮಗಾರಿಯ ಮೂಲ ಅಂದಾಜು ಅನುದಾನ 54.37 ಕೋ. ರೂ.ಗೆ ಅನುಮೋದನೆ ಪಡೆಯಲಾ ಗಿತ್ತು. ಆದರೆ, ಹೆಚ್ಚುವರಿ ಕಾಮಗಾರಿ ಮತ್ತು ವಿವಿಧ ತಾಂತ್ರಿಕ ಅಂಶಗ ಳಿಂದಾಗಿ ಒಟ್ಟು ವೆಚ್ಚವು 63.34 ಕೋ. ರೂ.ಗೆ ಹೆಚ್ಚಿಸಿ, ಹೆಚ್ಚುವರಿ 8.86 ಕೋ.ರೂ. ಬಿಡುಗಡೆ ಮಾಡುವಂತೆ ಕೋರಲಾಗಿತ್ತು. ಇತ್ತೀಚಿಗೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಹೆಚ್ಚುವರಿ ಅನುದಾನಕ್ಕೆ ಅನುಮೋದನೆ ನೀಡಿ ಬಿಡುಗಡೆ ಮಾಡುವಂತೆ ಆದೇಶಿಸ ಲಾಗಿದೆ.

ಗಂಧದ ಕೋಠಿ ಆವರಣದಲ್ಲಿ ನಿರ್ಮಿಸುತ್ತಿರುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡ ಮೊದಲನೇ ಅಂತಸ್ತಿನ



(ಜಿ +1) ರಚನೆಯನ್ನು ಒಳ ಗೊಂಡಿದೆ. ಕಾಮಗಾರಿಯ ಸಮಯ ದಲ್ಲಿ ಹಳೆಯ ಕಟ್ಟಡಗಳ ತೆರವು, ಗಂಧದ ಮರಗಳ ಸ್ಥಳಾಂತರ ಮತ್ತು ನೆಲಮಟ್ಟದ ವ್ಯತ್ಯಾಸದಿಂದಾಗಿ ಹೆಚ್ಚು ವರಿ ವೆಚ್ಚ ಉಂಟಾಗಿದೆ. ಪಾರ್ಕಿಂಗ್, ತೇಗದ ಮರದ ಬಾಗಿಲುಗಳು, ಮಳೆ ನೀರು ಒಡ್ಡುವ ಕೊಳವೆಗಳು ಮತ್ತು ವೀಲ್‌ಚೇರ್‌ಗೆ ಅನುಕೂಲವಾಗು ವಂತೆ ಬಾಗಿಲುಗಳ ವಿಸ್ತರಣೆಯಂತಹ ಹೆಚ್ಚುವರಿ ಅಂಶಗಳು ಸೇರಿವೆ.

ಮುಖ್ಯ ಇಂಜಿನೀಯರ್ ಪರಿಶೀಲ ನೆಯ ನಂತರ ಕಾಮಗಾರಿಯ ಪರಿಷ್ಕೃತ ಅಂದಾಜಿನಲ್ಲಿ 5.52 ಕೋ. ರೂ. ಹೆಚ್ಚುವರಿ ಅಂಶಗಳ ವೆಚ್ಚ ಕಂಡು ಬಂದಿದೆ. ಇದರ ಜೊತೆಗೆ 5.60 ಕೋ.ರೂ. ಬೆಲೆ ಏರಿಕೆಗೆ ಸಂಬಂಧಿಸಿದೆ. ಒಟ್ಟಾರೆ, ಪರಿಷ್ಕೃತ ವೆಚ್ಚವು ಮೂಲ ಅಂದಾಜಿಗಿಂತ ಶೇ. 26.68 ರಷ್ಟು ಹೆಚ್ಚಾಗಿದೆ. ಟೆಂಡರ್ ಮೊತ್ತಕ್ಕಿಂತ ಶೇ.16.48 ಅಧಿಕವಾಗಿದೆ.

ಸರ್ಕಾರ ಈ ಕಾಮಗಾರಿಯನ್ನು ಕೂಲಂಕುಷವಾಗಿ ಪರಿಶೀಲಿಸಿ, 8.96 ಕೋ.ರೂ. ಹೆಚ್ಚುವರಿ ಮೊತ್ತವನ್ನು ಬಿಡುಗಡೆಗೊಳಿಸಲು ಆದೇಶಿಸಿದೆ. ಈ ಆಸ್ಪತ್ರೆಯು ಪೂರ್ಣಗೊಂಡು ಕಾರ್ಯಾರಂಭಗೊಂಡರೆ ಹಾಸನ ಮತ್ತು ಸುತ್ತಮುತ್ತಲಿನ ಜಿಲ್ಲೆಗಳ ಜನರಿಗೆ ಜೊತೆಗೆ ನೆರೆಯ ರಾಜ್ಯಗಳ ರೋಗಿಗಳಿಗೂ ಗುಣಮಟ್ಟದ ವೈದ್ಯಕೀಯ ಸೇವೆಯನ್ನು ಕೈಗೆಟು ಕುವ ದರದಲ್ಲಿ ಒದಗಿಸಲಿದೆ.

# ಕಾಲುವೆ-ರಸ್ತೆ ಬಿಟ್ಟು ಉಳಿದ ಎಲ್ಲಾ ಜಾಗ ಪೋಡಿಯಾಗಬೇಕು

## ಶಾಲೆಗಳ ದಾಖಲಾತಿ ಸರಿಪಡಿಸಿ | ಕೆಡಿಪಿ ಸಭೆಯಲ್ಲಿ ಸಚಿವ ಕೃಷ್ಣಬೈರೇಗೌಡ ಅಧಿಕಾರಿಗಳಿಗೆ ಸೂಚನೆ

• ಪ್ರಜೋದಯ ವರದಿ

**ಹಾಸನ:** ಕಾಲುವೆ ಹಾಗು ರಸ್ತೆ ಹೊರತುಪಡಿಸಿ ಉಳಿದೆಲ್ಲಾ ಆಸ್ತಿ ಪೋಡಿಯಾಗ ಬೇಕೆನ್ನುವುದು ಸರ್ಕಾ ರದ ಧ್ಯೇಯವಾಗಿದ್ದು, ಸರ್ಕಾರಿ ಶಾಲೆಗಳ ದಾಖಲಾತಿ ಸರಿಪಡಿಸಿಕೊಳ್ಳ ಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಸೂಚಿಸಿ ದರು.

ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ಮಂಗಳವಾರ ನಡೆದ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಕೆ.ಎನ್.ಬಲರಾಮ್ ಅವರ ಜಿಲ್ಲೆಯ 2,396 ಶಾಲೆಗಳ ಪೈಕಿ 1,368 ಶಾಲೆಗಳು ನಿಖರ ದಾಖ ಲಾತಿ ಹೊಂದಿದ್ದು, 1,031 ಶಾಲೆ ಗಳಿಗೆ ದಾಖಲಾತಿಗಳೇ ಇಲ್ಲವೆಂಬ ಉತ್ತರಕ್ಕೆ ಪ್ರತಿಕ್ರಿಯಿಸಿದ ಸಚಿವರು, ಲ್ಯಾಂಡ್ ಬೀಟ್ ಆ್ಯಪ್‌ನಡಿ ನಮೂದಿ ಸಲು ಅವಕಾಶ ಕಲ್ಪಿಸಲಾಗಿದೆ. ನಂತರ ತಹಶೀಲ್ದಾರ್ ಮೂಲಕ ಪ್ರಕ್ರಿಯೆ ಪ್ರಾರಂಭಿಸಬಹುದು. ಖಾತೆ ಆಗಿ ದೆಯೋ, ಇಲ್ಲವೋ ಎಂಬುವುದನ್ನು



ಹಾಸನ ಜಿಲ್ಲೆಯಲ್ಲಿ ವರ್ಷದಿಂದ ವರ್ಷಕ್ಕೆ ಸರ್ಕಾರಿ ಶಾಲೆಗೆ ಪ್ರವೇಶ ಪಡೆಯುತ್ತಿರುವ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆ. ಅಧಿಕಾರಿಗಳು ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕು. ನಾನು ಕನ್ನಡ ಮಾಧ್ಯಮದಲ್ಲಿ ಓದಿದ್ದೇನೆ. ಇಂಗ್ಲೀಷ್ ವ್ಯಾಮೋಹದಿಂದ ಪೋಷಕರು ಹೊರಬರುವಂತೆ ಅರಿವು ಮೂಡಿಸಬೇಕು.

-ಕೃಷ್ಣಬೈರೇಗೌಡ, ಜಿಲ್ಲಾ ಉಸ್ತುವಾರಿ ಸಚಿವ

ಪರಿಶೀಲಿಸಿ ಆರ್‌ಟಿಸಿಗೆ ಕ್ರಮ ವಹಿಸ ಬೇಕು. ನಂತರ ಪೋಡಿ ಮಾಡಿದರೆ ಹೊಸ ಸರ್ವೆ ನಂಬರ್ ದೊರೆಯು ತ್ತದೆ. ಜಿಲ್ಲೆಯ ಯಾವುದಾದರೂ ಹೋಬಳಿಯಿಂದ ತಕ್ಷಣವೇ ಕ್ರಮ ಕೈಗೊಳ್ಳಬೇಕೆಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿ, ತಹಶೀಲ್ದಾರ್, ಪುರಸಭೆ, ಪಟ್ಟಣ ಪಂಚಾಯಿತಿ ಹಾಗು ಗ್ರಾಮ ಪಂಚಾಯಿತಿ ಅಧಿ ಕಾರಿಗಳು ವಿಚಾರವನ್ನು ಗಂಭೀರ ವಾಗಿ ಪರಿಗಣಿಸಬೇಕೆಂದರು.

ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಕೆ.ಎನ್.ಬಲರಾಮ್ ಅವರು ಮಾತನಾಡಿ, ಜಿಲ್ಲೆಯಲ್ಲಿ ಸರ್ಕಾರಿ ಶಾಲೆಯಲ್ಲಿ ಓದುತ್ತಿರುವ ಮಕ್ಕಳ ಸಂಖ್ಯೆ 72 ಸಾವಿರವಿದ್ದು, ಸರ್ಕಾರಿ, ಅನುದಾನಿತ ಹಾಗು ಅನುದಾನ ರಹಿತ ಶಾಲೆ ಸೇರಿ 2 ಲಕ್ಷ ಮಕ್ಕಳು ಪ್ರವೇಶ ಪಡೆದಿದ್ದಾರೆ. ಎಸ್ ಎಸ್‌ಎಲ್‌ಸಿಯಲ್ಲಿ 22 ಸಾವಿರ ವಿದ್ಯಾ ರ್ಥಿಗಳು ವ್ಯಾಸಂಗ ಮಾಡುತ್ತಿ ದ್ದಾರೆ. ಈ ಬಾರಿ ಫಲಿತಾಂಶ ಸುಧಾರಣೆಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದರು.

1 ರಿಂದ 5 ವಿದ್ಯಾರ್ಥಿಗಳಿರುವ 362, 5 ರಿಂದ 10 ಮಕ್ಕಳಿರುವ 331, 11 ರಿಂದ 20 ಮಕ್ಕಳಿರುವ 675 ಹಾಗು 21 ರಿಂದ 30 ವಿದ್ಯಾರ್ಥಿ ಗಳಿರುವ 300 ಸರ್ಕಾರಿ ಶಾಲೆಗಳಿವೆ. ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಪ್ರೌಢ ಶಾಲೆಯೊಂದರಲ್ಲಿ ನಾಲ್ವರು ವಿದ್ಯಾರ್ಥಿಗಳಿದ್ದು, ಮೂವರು ಶಿಕ್ಷಕರು ಪಾಠ ಮಾಡುತ್ತಿದ್ದಾರೆಂದು ಸಭೆಯ ಗಮನಕ್ಕೆ ತಂದರು.

**ಗ್ರಾ.ಪಂ.ಗೊಂದು ಮಾದರಿ ಶಾಲೆ ಏಕೆ**

ಕೆಲವು ಖಾಸಗಿ ಶಿಕ್ಷಣ ಸಂಸ್ಥೆ ಯವರು ಒಂಬತ್ತನೇ ತರಗತಿವರೆಗೆ ಪ್ರವೇಶ ನೀಡಿ ನಂತರ ಇಲ್ಲಸಲ್ಲದ ಕಾರಣವೊಡ್ಡಿ ಪ್ರಮಾಣ ಪತ್ರ ಕೊಟ್ಟು ಕಳುಹಿಸುತ್ತಾರೆ. ಕಲಿಕೆಯಲ್ಲಿ ಹಿಂದು ಳಿದ ಮಗು ಏಕಾಏಕಿ ಹತ್ತನೇ ತರ ಗತಿಗೆ ಬಂದಾಗ ಆ ಶಾಲೆಯ ಫಲಿ ತಾಂಶದಲ್ಲಿ ಇಳಿಕೆಯಾಗುವುದು ಸಾಮಾನ್ಯ. 8 ಮತ್ತು 9ನೇ ತರಗತಿ ಯಲ್ಲಿದ್ದಾಗ ಮಗುವಿಗೆ ಟಿಸಿ ಕೊಟ್ಟು ಕಳುಹಿಸುವ ಶಿಕ್ಷಣ ಸಂಸ್ಥೆಗಳನ್ನು ಗುರುತಿಸಿ ಅಂತಹವರ ಪರವಾನಗಿ ರದ್ದುಪಡಿಸಲು ಕ್ರಮ ಕೈಗೊಳ್ಳ ಬೇಕೆಂದು ಸಚಿವ ಕೃಷ್ಣಬೈರೇಗೌಡ ಅವರು ಹೇಳಿದರು.

ಇಂಗ್ಲೀಷ್ ಮಾಧ್ಯಮ ಶಾಲೆಗೆ ಮಕ್ಕಳನ್ನು ಸೇರಿಸಬೇಕೆಂಬ ವ್ಯಾಮೋಹ ಪೋಷಕರಿಗೆ ಹೆಚ್ಚಾಗಿದೆ. ಗ್ರಾಮ ಪಂಚಾಯಿತಿಗೊಂದು ಮಾದರಿ ಶಾಲೆ ತೆರೆಯಲು ಸರ್ಕಾರ ಮುಂದಾಗಿದೆ. ಅದಕ್ಕಾಗಿ 8 ಕೋ. ರೂ. ಅನುದಾನ ಶಿಕ್ಷಕರು, ಸೌಕರ್ಯ ಗಳನ್ನು ಕಲ್ಪಿಸಬೇಕು. ಇಂಗ್ಲೀಷ್ ಮಾಧ್ಯಮ ಶಾಲೆ ತೆರೆದರೆ ಕನ್ನಡ ಮಾಧ್ಯಮ ಶಾಲೆಗಳಿಗೆ ದಾಖಲಾತಿ ಕುಸಿಯುತ್ತದೆ. ಆಗ ಅಲ್ಲಿನ ಶಿಕ್ಷಕರು ಎಲ್ಲಿಗೆ ಹೋಗಬೇಕೆಂದು ಪ್ರಶ್ನಿಸಿ ದರು.

# ಚಿನ್ನದ ಸರಕ್ಕಾಗಿ ಮಾವನ ಮಗಳ ಕೊಲೆ: ಆರೋಪಿ ಆತ್ಮಹತ್ಯೆ

## ಹೃದಯಾಘಾತವೆಂದು ಬಿಂಬಿಸಲು ಯತ್ನಿಸಿದ್ದ ಹಂತಕ | ತನಿಖೆ ವೇಳೆ ಕೊಲೆ ರಹಸ್ಯ ಬಹಿರಂಗ

• ಪ್ರಜೋದಯ ವರದಿ

**ಅರಸೀಕೆರೆ :** ಚಿನ್ನದ ಮಾಂಗಲ್ಯ ಸರ ಆಸೆಗೆ ಸ್ವಂತ ಮಾವನ ಮಗಳನ್ನೇ ಕೊಲೆ ಮಾಡಿ ನಂತರ ಹೃದಯಾಘಾತ ದಿಂದ ಮೃತಪಟ್ಟಿದ್ದಾರೆಂದು ಬಿಂಬಿಸಿ ರುವ ಘಟನೆ ತಾಲ್ಲೂಕಿನ ಡಿಗ್ಗೇನಹಳ್ಳಿ ಗ್ರಾಮದಲ್ಲಿ ತಡವಾಗಿ ಬೆಳಕಿಗೆ ಬಂದಿದೆ.

ಶಕುಂತಲಾ (48) ಮೃತ ದುರ್ದೈವಿ. ಶಿವಮೂರ್ತಿ (55) ಮಾವನ ಮಗಳನ್ನೇ ಕೊಂದು ಆತ್ಮ ಹತ್ಯೆಗೆ ಮಾಡಿಕೊಂಡಿದ್ದಾನೆ. ಪ್ರಕರ ಣದ ತನಿಖೆ ತೀವ್ರಗೊಳ್ಳುತ್ತಿದ್ದಂತೆ ಹೆದರಿದ ಆರೋಪಿ ಶಿವಮೂರ್ತಿ ಘಟನೆ ನಡೆದು ವಾರದ ನಂತರ ತನ್ನ



ಮನೆಯಲ್ಲಿಯೇ ನೇಣು ಬಿಗಿದು ಕೊಂಡು ಆತ್ಮಹತ್ಯೆ ಮಾಡಿ ಕೊಂಡಿದ್ದಾನೆ.

**ಘಟನೆ ವಿವರ**

27 ವರ್ಷಗಳ ಹಿಂದೆ ಮಾವನ ಮಗ ಪಾಲಾಕ್ಷ ಜೊತೆ ಶಕುಂತಲಾ ವಿವಾಹವಾಗಿದ್ದರು. ದಂಪತಿಗೆ ಮಕ್ಕಳಿಲ್ಲದ ಕಾರಣ ಗ್ರಾಮದಲ್ಲಿರುವ ಮನೆಯಲ್ಲಿ ಇಬ್ಬರೇ ವಾಸವಿದ್ದರು. ಶಕುಂತಲಾ ಮಾವನ ಮಗ ಶಿವಮೂರ್ತಿ ಪಾಲಾಕ್ಷ ಅವರಿಂದ ಮೂವತ್ತು ಸಾವಿರ ರೂ. ಸಾಲ ಪಡೆದಿದ್ದ. ಹಣವನ್ನು ವಾಪಾಸ್ ನೀಡುವಂತೆ ಪಾಲಾಕ್ಷ ಕೇಳುತ್ತಲೇ ಇದ್ದರು. ಶಿವಮೂರ್ತಿ ಹಾಗು ಪಾಲಾಕ್ಷ ನಡುವೆ ಜಮೀನು ವ್ಯಾಜ್ಯವಿದ್ದು, ಸರ್ವೆ ಮಾಡಿಸಲು ಮುಂದಾಗಿದ್ದರು.

ಸೆ.20 ರಂದು ಮಧ್ಯಾಹ್ನ ಪಾಲಾಕ್ಷ ಅವರು ದನ ಮೇಯಿಸಲು ಹೋಗಿದ್ದ ವೇಳೆ ಮನೆಗೆ ಬಂದ ಶಿವಮೂರ್ತಿಗೆ ಕಾಫಿ ತರುವುದಾಗಿ ಹೇಳಿ ಶಕುಂತಲಾ ಅಡುಗೆ ಮನೆಗೆ ಹೋದಾಗ ಹಿಂಬಾಲಿಸಿ ಹೋದ ಶಿವಮೂರ್ತಿ ಕತ್ತು ಹಿಸುಕಿ ಕೊಲೆ ಮಾಡಿ ಆಕೆಯ ಕುತ್ತಿಗೆಯಲ್ಲಿದ್ದ ಎರಡು ಎಳೆಯ 36 ಗ್ರಾಂ ತೂಕದ ಚಿನ್ನದ ಸರ ಕಸಿದುಕೊಂಡು ಮೊದಲೇ ತಂದಿದ್ದ ಒಂದು ಎಳೆಯ ನಕಲಿ ಸರವನ್ನು ಹಾಕಿ ಪರಾರಿಯಾಗಿದ್ದ, ಮಧ್ಯಾಹ್ನ ಮನೆಗೆ ಬಂದ ಪಾಲಾಕ್ಷ ತನ್ನ ಸಹೋದರಿಯರಿಗೆ ಬಾಗಿನ ಕೊಡಲು ಕಾಯಿ ಸುಲಿಯುತ್ತಿದ್ದರು. ಈ ವೇಳೆ ನೀರಿನ ಟ್ಯಾಂಕ್ ತುಂಬಿ ನೀರು ಹರಿದು ಹೋಗುತ್ತಿತ್ತು. ಮೋಟಾರ್ ಆಫ್ ಮಾಡುವಂತೆ ಶಕುಂತಲಾಗೆ ಹೇಳಿದ್ದಾರೆ. ಶಕುಂತಲಾ ಮಾತನಾಡ ದಿದ್ದಾಗ ಮನೆಯೊಳಗೆ ಹೋಗಿ

» ನಾಲ್ಕನೇ ಪುಟದಲ್ಲಿ

# ರಷ್ಯಾ ಇಂಧನ ಖರೀದಿ ನಿಲ್ಲಿಸಿ : ಟ್ರಂಪ್

• ಪ್ರಜೋದಯ ವರದಿ

**ನವದೆಹಲಿ :** ಭಾರತ ಮತ್ತು ಚೀನಾ ದೇಶಗಳು ರಷ್ಯಾ-ಉಕ್ರೇನ್ ಯುದ್ಧದ ಪ್ರಾಥಮಿಕ ನಿರ್ಮಾಪಕ ರಾಗಿದ್ದು, ಕೂಡಲೇ ರಷ್ಯಾದಿಂದ ಇಂಧನ ಖರೀದಿಸುವುದನ್ನು ನಿಲ್ಲಿಸ ಬೇಕೆಂದು ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.


ವಿಶ್ವಸಂಸ್ಥೆಯ ಸಾಮಾನ್ಯ ಸಭೆ ಯಲ್ಲಿ ಮಂಗಳವಾರ ಭಾಷಣ ಮಾಡಿದ ಅವರು, ಉಕ್ರೇನ್ ಯುದ್ಧಕ್ಕೆ ಭಾರತ ಮತ್ತು ಚೀನಾ ಪ್ರಾಥಮಿಕ ಹಣಕಾಸು ಒದಗಿಸುವ ವರೆಂದು ಕರೆದಿದ್ದು, ಯುರೋಪ್ ರಷ್ಯಾದ ತೈಲ ಖರೀದಿಯನ್ನು ನಿಲ್ಲಿಸಬೇಕೆಂದು ಒತ್ತಾಯಿಸಿದ್ದಾರೆ.

# ವಿಶ್ವಗುರು ಮೋದಿಗೆ ಮಾಧ್ಯಮಗಳೆಂದರೆ ಭಯವೇಕೆ?

• ಪ್ರಜೋದಯ ವರದಿ

**ಹಾಸನ:** ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕಳೆದ 10 ವರ್ಷ ಗಳಲ್ಲಿ 3 ಸಾವಿರ ಬಾರಿ ಸುದ್ದಿ ಗೋಷ್ಠಿ ಮಾಡಿದ್ದಾರೆ. ವಿಶ್ವಗುರು ಎನಿಸಿ ಕೊಳ್ಳುವ ಪ್ರಧಾನಿ ನರೇಂದ್ರ ಮೋದಿ ಏಕೆ ಒಂದು ಬಾರಿಯೂ ಮಾಧ್ಯಮ ದವರೊಂದಿಗೆ ಮಾತನಾಡಿಲ್ಲವೆಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರು ಪ್ರಶ್ನಿಸಿದರು.

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿ ಯಲ್ಲಿ ಮಂಗಳವಾರ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ಅವರು, ಜಿಎಸ್‌ಟಿ ಹೊರೆ ಕಡಿಮೆ ಮಾಡಿರು ವುದೇ ದೊಡ್ಡ ಸಾಧನೆ ಎಂಬಂತೆ ಬಿಂಬಿಸಿಕೊಳ್ಳುತ್ತಿದ್ದಾರೆ. ಸ್ವದೇಶಿ ವಸ್ತು ಗಳ ಬಳಸಿ ಎನ್ನುವ ಪ್ರಧಾನಿ ತಾವು



ಮಾತ್ರ ವಿದೇಶಿ ಕಂಪನಿಯ ಕಾರು ಗಳಲ್ಲಿ ಓಡಾಡುತ್ತಾರೆ. ಅವರಾಡುವ ಮಾತು ಮತ್ತು ಕಾರ್ಯಕ್ಕೆ ಹೊಂದಾ ಣಿಕೆಯೇ ಆಗುವುದಿಲ್ಲ. ಬಿಜೆಪಿ ಸಾಹುಕಾರರ ಪಕ್ಷ. ಆ ಪಕ್ಷದ ಯಾರಿ ಗೂ ದೇಶದ ಅಭಿವೃದ್ಧಿ ಬೇಕಿಲ್ಲ. ಪ್ರಚಾರಕ್ಕಾಗಿ ಹಪಹಪಿಸುತ್ತಾರೆ. ಮಾಧ್ಯಮಗಳು ಸಹ ಅವರಿಗೆ ಪ್ರಾಧಾನ್ಯತೆ ನೀಡುತ್ತವೆ. ಪತ್ರಕರ್ತ ರನ್ನು ಕಂಡರೆ ಪ್ರಧಾನಿಗೆ ಹೆದರಿಕೆ ಏಕೆಂದು ಕೇಳಿದರು.

» ನಾಲ್ಕನೇ ಪುಟದಲ್ಲಿ

# ಅರಕಲಗೂಡು ದಸರಾ ಉದ್ಘಾಟನೆಗಾಗಿ ದೀಪಾ ಭಾಸ್ತಿಗೆ ಆಹ್ವಾನ



• ಪ್ರಜೋದಯ ವರದಿ

**ಹಾಸನ:** ಅರಕಲಗೂಡು ದಸರಾ ಮಹೋತ್ಸವಕ್ಕೆ ಅಂತರಾಷ್ಟ್ರೀಯ ಬೂಕರ್ ಪ್ರಶಸ್ತಿ ವಿಜೇತ ಲೇಖಕಿ ದೀಪಾ ಭಾಸ್ತಿ ಅವರಿಗೆ ಶಾಸಕ ಎ. ಮಂಜು ಆಹ್ವಾನಿಸಿದ್ದಾರೆ.

ಕೊಡಗು ಜಿಲ್ಲೆಯ ಮಡಿಕೇರಿಯ ನೂತನ ಬಡಾವಣೆಯಲ್ಲಿರುವ ಅವರ ನಿವಾಸಕ್ಕೆ ತೆರಳಿ ದೀಪಾ ಭಾಸ್ತಿ ಅವ ರನ್ನು ಆಹ್ವಾನಿಸಿದರು. ಬಾನು ಮುಷ್ತಾಕ್ ಅವರ ಸಣ್ಣಕಥಾ ಸಂಕಲನ ಹಾರ್ಟ್ ಲ್ಯಾಂಪ್ (ಎದೆಯ ಹಣತೆ) ಅನ್ನು ಆಂಗ್ಲಭಾಷೆಗೆ ಅನುವಾದಿಸಿದ್ದ ದೀಪಾ ಭಾಸ್ತಿ, ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿ ಗಳಿಸಿ ದೇಶ- ವಿದೇಶ ಗಳಲ್ಲಿ ಕನ್ನಡಿಗರ ಹೆಮ್ಮೆ ಹೆಚ್ಚಿಸಿದ್ದಾರೆ.

**ಅಸಂಘಟಿತ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಣೆ | ಸಚಿವ ಸಂತೋಷ್ ಲಾಡ್ ಹೇಳಿಕೆ**

# ಕಾರ್ಮಿಕ ಇಲಾಖೆಯಿಂದ ಜಿಲ್ಲೆಗೆ 54 ಕೋ.ರೂ. ಸೌಲಭ್ಯ

• ಪ್ರಜೋದಯ ವರದಿ

**ಹಾಸನ:** ವಿವಿಧ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಾರ್ಮಿಕರಿಗೆ ಕಳೆದ ಎರಡೂವರೆ ವರ್ಷಗಳಲ್ಲಿ 54 ಕೋ.ರೂ. ಮೊತ್ತದ ಸೌಲಭ್ಯ ಕಲ್ಪಿಸ ಲಾಗಿದೆ ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರು ಹೇಳಿದರು.

ನಗರದ ಮಲೆನಾಡು ತಾಂತ್ರಿಕ ಮಹಾವಿದ್ಯಾಲಯ ಸಭಾಂಗಣದಲ್ಲಿ ಮಂಗಳವಾರ ನಡೆದ ಅಸಂಘಟಿತ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತ ರಣೆ ಹಾಗು ಇಲಾಖೆ ಯೋಜನೆಗಳ ಅರಿವು ಮೂಡಿಸುವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ರಾಜ್ಯ ಸರ್ಕಾರ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯನ್ನು ರಚಿಸಿದೆ. ಈ ಮಂಡಳಿಯು ಅಂಬೇ ಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ ಸೇರಿ ಹಲವು ಸಾಮಾಜಿಕ



ಭದ್ರತಾ ಯೋಜನೆಗಳನ್ನು ಅನು ಷ್ಠಾನಗೊಳಿಸುತ್ತಿದೆ. ಯೋಜನೆಯಡಿ 101 ಅಸಂಘಟಿತ ವರ್ಗಗಳ ಸುಮಾರು 30 ರಿಂದ 40 ಲಕ್ಷ ಕಾರ್ಮಿ ಕರನ್ನು ಗುರುತಿಸಿ ಉಚಿತವಾಗಿ ನೋಂದಾಯಿಸಿ ಸ್ಮಾರ್ಟ್ ಕಾರ್ಡ್ ನೀಡಲಾಗುತ್ತಿದೆ. ರಾಜ್ಯದಲ್ಲಿ ಇದು ವರೆಗೆ 25,45,607 ಕಾರ್ಮಿಕರು ನೋಂದಣಿಯಾಗಿದ್ದು, ಜಿಲ್ಲೆಯಲ್ಲಿ 45,262 ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಿಸಲಾಗಿದೆ ಎಂದರು.

ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಕಾರ್ಮಿಕರಿಗೆ ಸಂಬಂಧಿಸಿದ ಐದು ಮಹತ್ವದ ಯೋಜನೆ ಜಾರಿ ಗೊಳಿಸಿದೆ. ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿ ಹಾರ ಯೋಜನೆಯಡಿ ಚಾಲಕರು, ನಿರ್ವಾಹಕರು ಮತ್ತು ಕ್ಲೀನರ್‌ಗಳಿಗೆ ಅಪಘಾತ ಪರಿಹಾರ ನೀಡಲಾಗು ತ್ತಿದ್ದು, ಜಿಲ್ಲೆಯಲ್ಲಿ ಇದುವರೆಗೆ 3 ಅಪಘಾತ ಪ್ರಕರಣಗಳಲ್ಲಿ 3.24 ಕೋ.ರೂ. ಪರಿಹಾರ ಮತ್ತು 42 ವಿದ್ಯಾರ್ಥಿಗಳಿಗೆ 4.20 ಕೋ.ರೂ. ಶೈಕ್ಷಣಿಕ ಧನಸಹಾಯ ನೀಡಲಾಗಿದೆ ಎಂದರು.

ಇ-ಕಾಮರ್ಸ್ ವಲಯದ ಗಿಗ್ ಕಾರ್ಮಿಕರಿಗೆ 2 ಲ.ರೂ. ಅಪಘಾತ ಪರಿಹಾರ ಮತ್ತು 2 ಲಕ್ಷ ರೂ. ಜೀವ ವಿಮಾ ಸೌಲಭ್ಯ ಒದಗಿಸಲಾಗುತ್ತಿದೆ. ದಿನಪತ್ರಿಕೆ ವಿತರಿಸುವ ಕಾರ್ಮಿಕರಿಗೆ 2 ಲಕ್ಷ ರೂ. ಅಪಘಾತ ಪರಿಹಾರ ಮತ್ತು 1 ಲಕ್ಷ ರೂ. ವರೆಗೆ ವೈದ್ಯಕೀ ಯ ಸೌಲಭ್ಯ ಒದಗಿಸುತ್ತದೆ. ಕರ್ನಾ ಟಕ ಸಿನಿಮಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿದ ಕಾರ್ಮಿ ಕರ ಸುಂಕ ಅಧಿನಿಯಮ-2024ರ ಅನುಸಾರ ಕಾರ್ಮಿಕರಿಗೆ ಸಾಮಾಜಿಕ ಭದ್ರತಾ ಸೌಲಭ್ಯ ಒದಗಿಸುವ ಉದ್ದೇಶದಿಂದ ಸಂಪನ್ಮೂಲ ಕ್ರೋಢಿ ಕರಿಸಲು ಅಧಿಸೂಚನೆ ಹೊರಡಿಸಲಾ ಗಿದೆ ಎಂದು ವಿವರಿಸಿದರು.

**ಹಿಂದುಳಿದವರಿಗೆ ಆಶಾ ದೀಪ**

ಪರಿಶಿಷ್ಟ ಜಾತಿ ಹಾಗು ಪಂಗಡದ ಯುವಕ-ಯುವತಿಯರಿಗೆ ಉದ್ಯೋಗ ಕೊಟ್ಟರೆ ಅಂತ ಉದ್ಯಮಿ ಗಳಿಗೆ ಇಲಾಖೆ ನೆರವಾಗುತ್ತದೆ. ಎರಡು ವರ್ಷ ಶೇ.50 ರಷ್ಟು ಸಂಬಳ ವನ್ನು ಕಾರ್ಮಿಕ ಇಲಾಖೆ ನೀಡುತ್ತದೆ. ರಾಜ್ಯದ 7 ಸಾವಿರ ಮಕ್ಕಳು ಯೋಜ ನೆಯ ಫಲಾನುಭವಿಗಳಾಗಿದ್ದಾ ರೆಂದರು.

ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರು ಮಾತನಾಡಿ, ಕಾರ್ಮಿಕರ ಜೀವನಕ್ಕೆ ಭದ್ರತೆಯನ್ನು ನೀಡುವ ಕೆಲಸವನ್ನು ಸಚಿವ ಸಂತೋಷ್ ಲಾಡ್ ಮಾಡುತ್ತಿದ್ದಾರೆ. ರಾಷ್ಟ್ರ ಅಭಿವೃದ್ಧಿ ಯಾಗಬೇಕೆಂದರೆ ಕಾರ್ಮಿಕರು

» ನಾಲ್ಕನೇ ಪುಟದಲ್ಲಿ

# ಅಪಘಾತ : ಎರಡು ಕಾರುಗಳು ಜಖಂ

• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನ ಆನೆ ಮಹಲ್ ಗ್ರಾಮದ ರಾಷ್ಟ್ರೀಯ ಹೆದ್ದಾರಿ 75ರಲ್ಲಿ ಮಂಗಳವಾರ ಕಾರುಗಳು ಪರಸ್ಪರ ಡಿಕ್ಕಿಯಾಗಿ ಸಂಪೂರ್ಣ ಜಖಂಗೊಂಡಿರುವ ಘಟನೆ ನಡೆದಿದೆ. ಮಂಗಳೂರಿನಿಂದ ಬರುತ್ತಿದ್ದ ಕಾರು ಹಾಗು ಮಂಗ ಳೂರಿಗೆ ಹೋಗುತ್ತಿದ್ದ ಕಾರಿನ ನಡುವೆ ಮುಖಾಮುಖಿ ಸಂಭವಿಸಿದೆ. ಕಾರಿನ ಲ್ಲಿದ್ದವರಿಗೆ ಸಣ್ಣಪುಟ್ಟ ಗಾಯಗಳಾ ಗಿದ್ದು, ಅನಾಹುತ ಸಂಭವಿಸಿಲ್ಲ.

ತುರ್ತು ಕಾಮಗಾರಿ ಹಿನ್ನಲೆಯಲ್ಲಿ ಏಕಾಏಕಿ ಮಂಗಳೂರು ಕಡೆಯಿಂದ ಬರುವ ವಾಹನಗಳ ಪಥದ ಸಂಚಾರ ವನ್ನು ರದ್ದು ಮಾಡಿ, ಹಾಸನ ಕಡೆ ಯಿಂದ ಮಂಗಳೂರು ಕಡೆಗೆ ಹೋಗುವ ವಾಹನಗಳನ್ನು ಮುಂಜಾ ಗ್ರತಾ ಕ್ರಮಗಳು ಅಥವಾ ಸೂಚನಾ ಫಲಕ ಹಾಕದೆ ಏಕಮುಖ ಸಂಚಾರಕ್ಕೆ ಅವಕಾಶ ಕಲ್ಪಿಸಿದ್ದರಿಂದ ಘಟನೆ ಸಂಭವಿಸಿದೆ. ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ನಡೆಸುತ್ತಿರುವ ಗುತ್ತಿಗೆ



ದಾರರಿಗೆ ಜಿಲ್ಲಾ ಮಟ್ಟದ ಅಧಿಕಾರಿ ಗಳು ಹಲವು ಬಾರಿ ಎಚ್ಚರಿಕೆ ನೀಡಿದರೂ ಸಹ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳದೆ ಕಾಮಗಾರಿ ನಡೆಸುತ್ತಿರು ವುದರಿಂದ ಅಪಘಾತಗಳು ದಿನನಿತ್ಯ ನಡೆಯುತ್ತಿವೆ ಎಂದು ಸಾರ್ವ ಜನಿಕರು ಆರೋಪಿಸಿದ್ದಾರೆ.



## ಹರಳು ಚೋರೆ - ಇದೆಂಥಾ ಹಕ್ಕಿ?

ನನ್ನ ಹತ್ತಿರ ಸ್ವಂತ ವಾಹನ ಇಲ್ಲದ ಕಾಲ. ಎಲ್ಲಾದರೂ ಹೋಗಬೇಕಾದರೆ ಬಸ್ ನಿಲ್ದಾಣದ ವರೆಗೆ ನಡೆಯುವುದು ಮಾಮೂಲಿನ ಸಂಗತಿಯಾಗಿತ್ತು. ಮಧ್ಯಾಹ್ನ ಮುಖ್ಯ ಶಿಕ್ಷಕರ ಸಭೆಯಲ್ಲಿ ಬಾಗವಹಿಸಬೇಕಾಗಿತ್ತು. ಬೆಳಗ್ಗೆ ಶಾಲೆಗೆ ಹೋಗಿ ಬೆಳಗ್ಗಿನ ಅವಧಿಯ ಪಾಠಗಳನ್ನು ಮುಗಿಸಿ, ಊಟ ಮಾಡಿ ಹೊರಟೆ. ಶಾಲೆಯಿಂದ ಯಾವುದಾದರೂ ಸರ್ವೀಸ್ ಆಟೋ ಸಿಗುವ ಜಾಗಕ್ಕೆ ಬರಬೇಕಾದರೆ ಸುಮಾರು ಒಂದು ಕಿಲೋಮೀಟರ್ ದೂರ ನಡೆಯಬೇಕಾಗಿತ್ತು. ಮಧ್ಯಾಹ್ನ ಆದ್ದರಿಂದ ಯಾರೂ ಓಡಾಡುತ್ತಿರಲಿಲ್ಲ, ಬೀದಿ ನಿರ್ಜನವಾಗಿತ್ತು. ನಡೆದುಕೊಂಡು ಕೂಡುರಸ್ತೆ ಹತ್ತಿರ ಬಂದು ನಿಂತೆ. ಯಾವುದೇ ವಾಹನಗಳ ಓಡಾಟವೂ ಇರಲಿಲ್ಲ.

ನಾನು ನಿಂತ ಜಾಗದ ಹಿಂದೆ ಮರಗಳಿಂದ ಹ್ಞೂಂ... ಹ್ಞೂಂ.. ಹ್ಞೂಂ.. ಎಂದು ಯಾರೋ ದೊಡ್ಡದಾಗಿ ಹ್ಞೂಂ ಗುಟ್ಟುವ ಧ್ವನಿ ಕೇಳಿದಂತಾಯಿತು. ಮೊದಲೇ ನಿರ್ಜನ ಬೀದಿ, ಸಣ್ಣಗೆ ಭಯ ಆಗತೊಡಗಿತು. ಗೂಬೆಗಳೂ ಹೀಗೆ ಶಬ್ದಮಾಡುವುದರಿಂದ ಗೂಬೆ ಇರಬೇಕು ಎಂದುಕೊಂಡೆ. ಆದರೆ ಸುತ್ತಮುತ್ತಲಿನ ಮರಗಳಲ್ಲಿ ಎಲ್ಲೂ ಗೂಬೆ ಕುಳಿತ ಸುಳಿವೇ ಇರಲಿಲ್ಲ. ಹಾಗಾದರೆ ಒಂದು ಕೆಲಸ ಮಾಡೋಣ ಅಂದುಕೊಂಡು ಬ್ಯಾಗಿನಿಂದ ಮೊಬೈಲ್ ತೆಗೆದೆ. ಧ್ವನಿಮುದ್ರಕ ಅಂದರೆ ವಾಯ್ಸ್ ರೆಕಾರ್ಡರ್ ಓಪನ್ ಮಾಡಿ ಹ್ಞೂಂ... ಹ್ಞೂಂ.. ಎಂಬ ಧ್ವನಿಯನ್ನು ರೆಕಾರ್ಡ್ ಮಾಡಿಕೊಂಡೆ. ಆ ಜಾಗದಲ್ಲಿ ಮೊಬೈಲ್ ನೆಟ್ ವರ್ಕ್ ಸಿಗುತ್ತಿರಲಿಲ್ಲ. ಯಾವುದೇ ವಾಹನವೂ ಬಾರದ ಕಾರಣ ಅಲ್ಲಿಂದ ಮುಂದೆ ಇನ್ನೆರಡು ಕಿಲೋಮೀಟರ್ ನಡೆದು ಹೋಗಲು ತೀರ್ಮಾನಿಸಿದೆ.

ನಿರ್ಜನವಾದ ದಾರಿ. ಸೊಂಪಾಗಿ ಬೆಳೆದ ಮರಗಳು ರಸ್ತೆಯ ಎರಡೂ ಕಡೆ ಇದ್ದುದರಿಂದ ಯಾವುದೇ ಬಿಸಲಿನ ಝಳ ಇರಲಿಲ್ಲ. ಸ್ವಲ್ಪದೂರ ಹೋಗುತ್ತಿದ್ದಂತೆ ಗಾಢ ಹಸಿರು ಬಣ್ಣದ ರೆಕ್ಕೆ, ಕಂದು ಬಣ್ಣದ ಕತ್ತು ಮತ್ತು ತಲೆ, ಕಪ್ಪು ಬಣ್ಣದ ಪಟ್ಟೆಗಳಿರುವ ಬಾಲ, ತಿಳಿಕೆಂಪು ಬಣ್ಣದ ಪಾದಗಳಿರುವ ಹಕ್ಕಿಯೊಂದು ಪುರ್ರನೆ ನೆಲದಿಂದ ಹಾರಿ ಮರದ ನಡುವೆ ಅವಿತು ಕುಳಿತಿತು.

ಮರದಲ್ಲಿ ಹಕ್ಕಿ ಕಾಣಲು ಸಿಗುತ್ತದೆಯೋ ಎಂದು ನೋಡಿದೆ, ಮರದ ನಡುವಿನ ಹಸಿರು ಮತ್ತು ಕಂದುಗಳ ನಡುವೆ ಹಕ್ಕಿ ಎಲ್ಲಿದೆ ಎಂದು ಕಾಣಲೇ ಇಲ್ಲ. ಆದರೆ ಕೆಲವೇ ಕ್ಷಣದಲ್ಲಿ ಹಕ್ಕಿ ಅವಿತುಕೊಂಡ ದಿಕ್ಕಿನಿಂದ ಅದೇ ಹ್ಞೂಂ.. ಹ್ಞೂಂ.. ಕೂಗು ಕೇಳಿಸಿತು. ಸ್ವಲ್ಪ ಹಿಂದೆ ಕೂಗಿದ ಹಕ್ಕಿ ಇದೇ ಇರಬೇಕು ಎಂದು ಖಾತ್ರಿಯಾಯಿತು. ಆದರೂ ಖಚಿತ ಪಡಿಸೋಣ ಅಂತ ಹಕ್ಕಿವಿಜ್ಞಾನಿ ಮಿತ್ರರೊಬ್ಬರಿಗೆ ಇದರ ಕೂಗನ್ನು ಕಳಿಸಿದೆ. ಅವರು ಅದರ ಹೆಸರನ್ನು ಖಾತ್ರಿ ಮಾಡಿದರು.

ಭಾರತದ ಪಶ್ಚಿಮ ಘಟ್ಟಗಳು, ಹಿಮಾಲಯದ ತಪ್ಪಲು ಪ್ರದೇಶ ಮತ್ತು ಪೂರ್ವ ಭಾರತದಲ್ಲಿ ಕಾಣಸಿಗುವ ಈ ಹಕ್ಕಿ ಕಪೋತಗಳ ಜಾತಿಗೆ ಸೇರಿದ್ದು. ನೆಲದಲ್ಲಿ ಬಿದ್ದಿರುವ ಕಾಳು, ಹಣ್ಣುಗಳನ್ನು ಹೆಕ್ಕಿ ತಿನ್ನುವ ಈ ಹಕ್ಕಿಯ ಸಂತಾನೋತ್ಪತ್ತಿ ಕಾಲ ಜನವರಿಯಿಂದ ಮೇ ತಿಂಗಳ ನಡುವೆ. ಮರದಮೇಲೆ ಕಡ್ಡಿಗಳ ಸಹಾಯದಿಂದ ಗೂಡು ಕಟ್ಟಿ ಮೊಟ್ಟೆ ಇಟ್ಟು ಮರಿಮಾಡುತ್ತದೆ. ಒಂದಿಷ್ಟು ದಟ್ಟವಾದ ಕಾಡು ಇದ್ದರೆ ಈ ಹಕ್ಕಿ ನೋಡಲು ಸಿಗುತ್ತದೆ.

**– ಅರವಿಂದ ಕುಡ್ಲ,** ಬಂಟ್ವಾಳ

## 24–9–2025 ದಿನ ಭವಿಷ್ಯ

**ಮೇಷ:** ಇಂದು ನೀವು ನಿಮ್ಮ ಆರೋಗ್ಯ ಮತ್ತು ನೋಟವನ್ನು ಸುಧಾರಿಸಲು ಕೆಲಸ ಮಾಡಲು ಸಾಕಷ್ಟು ಸಮಯ ಹೊಂದಿರುತ್ತೀರಿ ಇಂದು ನೀವು ಸುಲಭವಾಗಿ ಬಂಡವಾಳ ಪಡೆಯಬಹುದು ಬಾಕಿಯಿರುವ ಸಾಲಗಳನ್ನು ಸಂಗ್ರಹಿಸಬಹುದು ಅಥವಾ ಹೊಸ ಯೋಜನೆಗಳಿಗೆ ಕೆಲಸ ಮಾಡಲು ಹಣ ಕೇಳಬಹುದು. ಮನೆಯ ಬಾಕಿಯಿರುವ ಗೃಹಕೃತ್ಯಗಳನ್ನು ಪೂರೈಸಲು ಅನುಕೂಲಕರ ದಿನ.

**ವೃಷಭ:** ಕೋಪದ ಬಡಿದೆಬ್ಬಿಸುವಿಕೆ ವಾದ ಮತ್ತು ಘರ್ಷಣೆಗೆ ಕಾರಣವಾಗಬಹುದು. ದೀರ್ಘ ಕಾಲ ಬಾಕಿಯಿದ್ದ ಬಾಕಿಗಳು ಕೊನೆಗೂ ದೊರಕುತ್ತವೆ. ನಿಮ್ಮ ಆಕರ್ಷಣೆ ಹಾಗೂ ವ್ಯಕ್ತಿತ್ವ ನೀವು ಹೊಸ ಸ್ನೇಹಿತರನ್ನು ಗಳಿಸಲು ಸಹಾಯ ಮಾಡುತ್ತದೆ. ನಿಮ್ಮ ಸಂಗಾತಿಯ ಕುಟುಂಬದ ಸದಸ್ಯರ ಅಡ್ಡಿಯ ಕಾರಣದಿಂದ ನಿಮ್ಮ ದಿನ ಸ್ವಲ್ಪ ಏರುಪೇರಾಗಬಹುದು.

**ಮಿಥುನ:** ಕಣ್ಣಿನ ಪೊರೆ ರೋಗಿಗಳಿಗೆ ಧೂಮಪಾನವು ಅವರ ಕಣ್ಣುಗಳಿಗೆ ಮತ್ತಷ್ಟು ಹಾನಿಯುಂಟುಮಾಡಬಹುದಾದ್ದರಿಂದ ಅವರು ಕಲುಷಿತ ಪರಿಸರದಲ್ಲಿ ಹೋಗಬಾರದು. ಸಾಧ್ಯವಾದರೆ ಸೂರ್ಯನ ಬೆಳಕಿಗೆ ಅತಿಯಾದ ಒಡ್ಡಿಕೊಳ್ಳುವಿಕೆಯನ್ನು ತಪ್ಪಿಸಿ. ನಿಮ್ಮ ತಾಯಿಯ ಬದಿಯಿಂದ ಇಂದು ಹಣಕಾಸಿನ ಲಾಭವನ್ನು ಪಡೆಯುವ ಪೂರ್ಣ ಸಾಧ್ಯತೆ ಇದೆ.

**ಕರ್ಕಾಟಕ:** ಬಸುರಿಯು ನೆಲದ ಮೇಲೆ ನಡೆದುಕೊಂಡು ಹೋಗುವಾಗ ವಿಶೇಷ ಕಾಳಜಿ ವಹಿಸಬೇಕು. ನೀವು ಪ್ರಯಾಣ ಮಾಡುವ ಮತ್ತು ಹಣ ಖರ್ಚು ಮಾಡುವ ಮನಸ್ಥಿತಿಯಲ್ಲಿರುತ್ತೀರಿ. ಆದರೆ ಹಾಗೆ ಮಾಡಿದಲ್ಲಿ ನೀವು ವಿಷಾದಿಸುತ್ತೀರಿ. ನಿಮ್ಮ ಕೋಪವನ್ನುನಿಯಂತ್ರಿಸಿ ಹಾಗೂ ಕುಟುಂಬದ ಸದಸ್ಯರ ಮನ ನೋಯಿಸುವುದನ್ನು ತಪ್ಪಿಸಿ.

**ಸಿಂಹ:** ಪತ್ನಿ ನೀವು ಹುರಿದುಂಬಿಸಬಹುದು. ಇಂದು, ನೀವು ಸಾಕಷ್ಟು ಸಕಾರಾತ್ಮಕತೆಯೊಂದಿಗೆ ಮನೆಯಿಂದ ಹೊರಬರುತ್ತೀರಿ, ಆದರೆ ಕೆಲವು ಅಮೂಲ್ಯ ವಸ್ತುವಿನ ಕಳ್ಳತನದಿಂದಾಗಿ, ನಿಮ್ಮ ಮನಸ್ಥಿತಿಗೆ ತೊಂದರೆಯಾಗಬಹುದು. ನಿಮ್ಮ ನಿರ್ಲಕ್ಷತನದ ಮತ್ತು ಊಹಿಸಲಾಗದ ವರ್ತನೆಯಿಂದ ನಿಮ್ಮ ಜೊತೆಗಿರುವ ಯಾರಾದರೂ ಬೇಸರಗೊಳ್ಳಬಹುದು.

ಕನ್ಯಾ: ಒಂದು ಲಾಭಕರ ದಿನ ಮತ್ತು ನೀವು ಧೀರ್ಘಕಾಲದ ಅನಾರೋಗ್ಯಕ್ಕೆ ಪರಿಹಾರ ಹುಡುಕಲು ಸಾಧ್ಯವಾಗಬಹುದು. ನಿಮ್ಮ ಹಣವನ್ನು ಸಂಗ್ರಹಿಸಿದಾಗ ಮಾತ್ರ ಹಣ ನಿಮ್ಮ ಕೆಲಸಕ್ಕೆ ಬರುತ್ತದೆ. ಇದನ್ನು ನೀವು ಚೆನ್ನಾಗಿ ಅರ್ಥಮಾಡಿಕೊಳ್ಳಿ ಇಲ್ಲದಿದ್ದರೆ ನೀವು ಮುಂಬರುವ ಸಮಯದಲ್ಲಿ ವಿಷಾದಿಸಬೇಕಾಗುತ್ತದೆ. ಸಂಬಂಧಿಗಳು/ಸ್ನೇಹಿತರು ಒಂದು ಅದ್ಭುತ ಸಂಜೆಗಾಗಿ ಬರುತ್ತಾರೆ.

ತುಲಾ: ಅಶಕ್ತ ದೇಹ ಮನಸ್ಸನ್ನು ದುರ್ಬಲಗೊಳಿಸುವುದರಿಂದ ನಿಮ್ಮ ಶಕ್ತಿಯನ್ನು ಮರಳಿ ಪಡೆಯಲು ಸಂಪೂರ್ಣ ವಿಶ್ರಾಂತಿ ತೆಗೆದುಕೊಳ್ಳಿ. ನಿಮ್ಮಲ್ಲಿ ಸಾಮರ್ಥ್ಯದ ಕೊರತೆಯಿರದೇ ಇಚ್ಛಾಶಕ್ತಿಯ ಕೊರತೆಯಿದೆಯೆಂದು ನೀವು ಅರ್ಥಮಾಡಿಕೊಳ್ಳಬೇಕು. ನಿಮ್ಮ ಹಣ ಖರ್ಚಾಗುತ್ತಿದೆ ಎಂಬುದರ ಮೇಲೆ ನಿಗಾ ಇರಿಸಿ.

**ವೃಶ್ಚಿಕ:** ನೀವು ಹೇರಳ ಶಕ್ತಿಯನ್ನು ಹೊಂದಿರುತ್ತೀರಿ – ಆದರೆ ಕೆಲಸದ ಒತ್ತಡ ನಿಮ್ಮನ್ನು ಉದ್ವಿಗ್ನಗೊಳಿಸುವಂತೆ ತೋರುತ್ತದೆ. ಇಂದು ಹೂಡಿಕೆಗಳನ್ನು ಮಾಡಬಾರದು. ಹಳೆಯ ಸಂಬಂಧಿಗಳು ಅವಿವೇಕದ ಬೇಡಿಕೆಗಳನ್ನು ಮಾಡುವ ಸಾಧ್ಯತೆಯಿದೆ. ಕೆಲವರಿಗೆ ಮದುವೆಯಾಗುವ ಸಾಧ್ಯತೆಗಳು ಹಾಗೂ ಇನ್ನೂ ಕೆಲವರಿಗೆ ಪ್ರಣಯ ಕಾಲ.

**ಧನು:** ಆರೋಗ್ಯ ಪರಿಪೂರ್ಣವಾಗಿರುತ್ತದೆ. ಇಂದು ನೀವು ಯಾವುದೇ ಅಜ್ಞಾತ ಮೂಲಗಳಿಂದ ಹಣವನ್ನು ಪಡೆಯಬಹುದು, ಇದರಿಂದ ನಿಮ್ಮ ಅನೇಕ ಆರ್ಥಿಕ ಸಮಸ್ಯೆಗಳು ದೂರವಾಗುತ್ತವೆ. ಈ ಅವಧಿ ನಿಮ್ಮ ಹೊಸ ಯೋಜನೆಗಳು ಹಾಗೂ ಆಲೋಚನೆಗಳ ಬಗ್ಗೆ ನಿಮ್ಮ ಪೋಷಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ಒಳ್ಳೆಯದಾಗಿದೆ. ಸ್ನೇಹ ಕಳೆದುಕೊಳ್ಳುವ ಸಾಧ್ಯತೆಗಳು ಇಂದು ಹೆಚ್ಚಾಗಿದೆ, ಎಚ್ಚರಿಕೆಯಿಂದಿರಿ.

**ಮಕರ:** ನಿಮ್ಮ ಭರವಸೆ ಒಂದು ಸಮೃದ್ಧ, ಸೂಕ್ಷ್ಮ ಪರಿಮಳಯುಕ್ತ ಮತ್ತು ಬೆರಗುಗೊಳಿಸುವ ಹೂವಿನ ಹಾಗೆ ಅರಳುತ್ತದೆ. ಹಿಂದಿನ ಬಂಡವಾಳದಿಂದ ಆದಾಯವನ್ನು ನಿರೀಕ್ಷಿಸಿದ್ದಲ್ಲಿ, ನಿಮ್ಮ ಹವ್ಯಾಸಗಳನ್ನು ಮುಂದುವರಿಸುವ ಮತ್ತು ಕುಟುಂಬದ ಸದಸ್ಯರಿಗೆ ಸಹಾಯ ಮಾಡುವ ಮೂಲಕ ನೀವು ಸಮಯ ಕಳೆಯಬಹುದು. ನೀವು ಇಂದು ಮದುವೆಯಾಗಿದ್ದಕ್ಕೆ ಅದೃಷ್ಟಶಾಲಿಗಳೆನಿಸುತ್ತೀರಿ.


**ಕುಂಭ:** ವಿಶೇಷವಾಗಿ ಹೃದಯ ರೋಗಿಗಳು ಕಾಫಿಯನ್ನು ಬಿಡಬೇಕು. ನಿಮ್ಮ ಸ್ನೇಹಿತರ ಸಹಾಯದಿಂದ ಹಣಕಾಸು ಸಮಸ್ಯೆಗಳು ನಿವಾರಣೆಯಾಗುತ್ತವೆ. ಕುಟುಂಬದ ಸದಸ್ಯರು ಅಥವಾ ಸಂಗಾತಿ ಕೆಲವು ಆತಂಕಗಳನ್ನು ಉಂಟುಮಾಡುತ್ತಾರೆ. ಪ್ರಯಾಣದಲ್ಲಿ ಪ್ರಣಯ ಸಂಪರ್ಕದ ಸಾಧ್ಯತೆಯಿದೆ. ನೀವು ಶ್ರಮ ಮತ್ತು ತಾಳ್ಮೆಯ ಮೂಲಕ ನಿಮ್ಮ ಗುರಿಗಳನ್ನು ತಲುಪುತ್ತೀರಿ.


**ಮೀನ:** ಅನಗತ್ಯ ಆಲೋಚನೆಗಳು ನಿಮ್ಮ ಮನಸ್ಸನ್ನು ಆಕ್ರಮಿಸಿಕೊಳ್ಳಲು ಬಿಡಬೇಡಿ. ಶಾಂತವಾಗಿ ಮತ್ತು ಒತ್ತಡ ಮುಕ್ತವಾಗಿ ಉಳಿಯಲು ಪ್ರಯತ್ನಿಸಿ ಹಾಗೂ ಅದು ನಿಮ್ಮ ಮಾನಸಿಕ ದೃಢತೆಯನ್ನು ಹೆಚ್ಚಿಸುತ್ತದೆ. ತಾತ್ಕಾಲಿಕ ಸಾಲಕ್ಕಾಗಿ ನಿಮ್ಮ ಬಳಿ ಬರುವವರನ್ನು ನಿರ್ಲಕ್ಷಿಸಿ. ಇಂದು ನಿಮ್ಮ ಮನಸಿನಲ್ಲಿ ಉದ್ಭವವಾಗುವ ಹೊಸ ಹಣಗಳಿಕೆಯು ವಿಚಾರಗಳ ಲಾಭ ತೆಗೆದುಕೊಳ್ಳಿ.

# ತಕ್ಕ ರೀತೀಲಿ ಕಲಿಸಿದ್ರೆ, ಲೆಕ್ಕ ಬಿಡ್ಸೋದೂ ಯಾವ್ ಲೆಕ್ಕ?

> ನಾನು ಯಾವುದನ್ನಾದರೂ ಮರೆತಿದ್ದರೆ ನಿಮ್ಮ ಲೇಖನ ಅದನ್ನು ನೆನಪಿಸುತ್ತದೆ!, ಲೇಖನ ಸ್ವಾರಸ್ಯಕರವಾಗಿತ್ತು. ಅದಕ್ಕಿಂತಲೂ ಹೆಚ್ಚಾಗಿ, ಕೊನೆಯಲ್ಲಿ ಕೊಟ್ಟ ಗಣಿತದ ಸಮಸ್ಯೆ ತುಂಬಾ ಆಸಕ್ತಿದಾಯಕವಾಗಿತ್ತು. ಹಿಂದೊಮ್ಮೆ ಕೊಟ್ಟ ಮಾರ್ವಾಡಿ ಮಾತ್ರೆಗಳ ಸಮಸ್ಯೆಯಂತಿತ್ತು ಎಂದು ಮುಂತಾಗಿ ಬರೆದರು. ಅಷ್ಟೇ ಅಲ್ಲ, ಸಮಂಜಸ ವಿವರಣೆಯೊಡನೆ ಲೆಕ್ಕದ ಸರಿ ಲೆಕ್ಕ(ಉತ್ತರ)ವನ್ನೂ ಒಪ್ಪಿಸಿದರು. ಇನ್ನು ಕೆಲವರು- ಪೆಟ್ಟಿಗೆಗಳ ತೂಕದಿಂದ ಕಂಡುಕೊಳ್ಳಬಹುದೇ? ಹೊರಸೂಸುವ ಪರಿಮಳದಿಂದ ತಿಳಿಯಬಹುದೇ? ಎಂದು ಪೆಟ್ಟಿಗೆಯಿಂದ ಹೊರಗೆ ಆಲೋಚಿಸಿ ಪ್ರಯತ್ನಪಟ್ಟವರೂ ಇದ್ದರು.

- ರೇಖಾಗಣಿತದಲ್ಲಿ ಒಂದು ತ್ರಿಕೋನದ ಮುಖ್ಯ ಗುಣವನ್ನು ಪ್ರಸ್ತಾವಿಸುತ್ತ ಭಾಸ್ಕರರು ಸಾಹಿತ್ಯವನ್ನು ಹೇಗೆ ಬಳಸಿಕೊಂಡಿದ್ದಾರೆ ನೋಡಿ: ಚಕ್ರ ಕ್ರೌಂಚಾಕುಲಿತ ಸಲಿಲೇ ಕ್ವಾಪಿ ದೃಷ್ಟಂ ತಡಾಗೇ ತೋಯಾದೂರ್ಧ್ವಂ ಕಮಲಕಲಿಕಾಗ್ರಂ ವಿತಸ್ತಿ ಪ್ರಮಾಣಂ ಮಂದಂ ಮಂದಂ ಚಲಿತಮನಿಲೇನಾಹತಂ ಹಸ್ತಯುಗ್ಮಂ ತಸ್ಮಿನ್ಮಗ್ನಂ ಗಣಕ ಕಥಯ ಕ್ಷಿಪ್ರಮಂಭಃ ಪ್ರಮಾಣಂ – ಚಕ್ರಕ್ರೌಂಚ ಪಕ್ಷಿಗಳಿಂದಲೂ ಕಮಲಗಳಿಂದಲೂ ಆವೃತವಾದ ಒಂದು ತಟಾಕವನ್ನು ನಮ್ಮ ಕಣ್ಣೆದುರಿಗೆ ನಿಲ್ಲಿಸಿದರು.
- ಅದರಲ್ಲಿ ನೀರಿನ ಮಟ್ಟದಿಂದ ಮೇಲಕ್ಕೆದ್ದಿರುವ ಒಂದು ಕಮಲ ಕಲಿಕಾಗ್ರವನ್ನು ಚಿತ್ರಿಸಿದರು.
- ಮಂದಮಾರುತವನ್ನು ಕರೆತಂದರು.
- ಅದರಿಂದ ಕಮಲದ ದಂಟು ಬಾಗಿ ಸ್ವಲ್ಪ ದೂರದಲ್ಲಿ ಅದರ ತುದಿ ಮುಳುಗಿಕೊಂಡುದನ್ನು ತೋರಿಸಿದರು.
- ಈ ದೂರವನ್ನೂ ನೀರಿನ ಮಟ್ಟದ ಮೇಲಿನ ದಂಟಿನ ಅಳತೆಯನ್ನೂ ಕೊಟ್ಟು ನೀರಿನ ಆಳವನ್ನು ಕ್ಷಿಪ್ರವಾಗಿ ಹೇಳೆಂದರು.





ಅರ್ಧದಷ್ಟು ಜನ ಇಂದಿನ ಶೀರ್ಷಿಕೆಯಲ್ಲಿ ಲೆಕ್ಕ ಎಂಬ ಪದ ಅದೂ ಎರಡೆರಡು ಬಾರಿ ಕಾಣಿಸಿರುವುದನ್ನು ನೋಡಿಯೇ- ಉಸ್ಸಪ್ಪಾ ಬೇಡಾ ನನಗಿದರ ಸಹವಾಸ ಎಂದು ನಿಟ್ಟುಸಿರಿಟ್ಟಿರುತ್ತೀರಿ, ಹಿಡಿಶಾಪ ಹಾಕಿರುತ್ತೀರಿ. ಉಳಿದರ್ಧ ಜನ ಇಂದಿನ ಶೀರ್ಷಿಕೆಯಲ್ಲಿ ಲೆಕ್ಕ ಎಂಬ ಪದ ಅದೂ ಎರಡೆರಡು ಬಾರಿ ಕಾಣಿಸಿರುವುದನ್ನು ನೋಡಿಯೇ- ಆಹಾ! ಕಾದಿದೆ ಮಿದುಳಿಗೆ ರಸದೌತಣ ಎಂದು ಬಾಯಲ್ಲಿ ನೀರೂರಿಸಿಕೊಂಡಿರುತ್ತೀರಿ, ಹಿಗ್ಗಿ ಹೀರೇಕಾಯಿಯಾಗಿರುತ್ತೀರಿ.

ಈ ನನ್ನ ಊಹೆ ಆಧಾರರಹಿತವೇನಲ್ಲ. ಕಳೆದ ವಾರ ಕಿತ್ತಳೆ ಪುರಾಣದ ಕೊನೆಯಲ್ಲಿ ಒಂದು ಜಾಣ್ಮೆಲೆಕ್ಕವನ್ನೂ ಸೇರಿಸಿದ್ದರಿಂದ, ಬಂದ ಪ್ರತಿಕ್ರಿಯೆಗಳ ಮಾದರಿ ಹೀಗಿತ್ತು: ಏನೋಪ್ಪಾ, ಲೆಕ್ಕದ್ದು ಬಿಡೋದಿಲ್ಲ ನಿಮ್ಮ ಚಾಳಿ. ಅದೇನ್ ಲೆಕ್ಕ ಲೆಕ್ಕ ಲೆಕ್ಕ? ಯಾಕ್ಹೀಗೆ ಮಾಡ್ತೀರಾ?, ಕಿತ್ತಳೆಯೇನೋ ರುಚಿರುಚಿಯಾಗಿತ್ತು. ಆದರೆ ಕೊನೆಯಲ್ಲಿದ್ದ ಲೆಕ್ಕ? ಅಯ್ಯೋ ದೇವ್ರೇ ನನ್ನಿಂದಾ ಗಲ್ಲಪ್ಪ!, ನೀವು ಸಂಸ್ಕೃತ, ಸಾಹಿತ್ಯ, ಅಥವಾ ನನಗಿಷ್ಟವಾಗೋ ಸಂಗತಿಗಳ ಬಗ್ಗೆ ಬರೆದ್ರೆ ಆಸಕ್ತಿ.

ಆದ್ರೆ ಲೆಕ್ಕದಲ್ಲಿ ನಾನು ಸ್ವಲ್ಪ ಹಿಂದೆ, ತರ್ಲೆ ಕಿತ್ಲೆ ಲೆಕ್ಕ ಬೇಡ ನನ್ಗೆ. ಅದನ್ನು ಬಿಟ್ರೆ, ಎಷ್ಟು ಒಳ್ಳೆ ಮಾಹಿತಿ ಈ ಅಂಕಣದಲ್ಲಿ!- ಇದು ಒಂದು ಗುಂಪಾದರೆ ಇನ್ನೊಂದು ಗುಂಪು ಇಂಥ ಸಮಸ್ಯೆಗಳನ್ನು ಬಿಡಿಸುವುದೆಂದರೆ ನನಗೆ ಪರಮಪ್ರೀತಿ. ಇದನ್ನು ಕೊಟ್ಟಿದಕ್ಕೆ ಧನ್ಯವಾದಗಳು, ಇಂಥ ಸ್ವಾರಸ್ಯಕರ ಲೆಕ್ಕಗಳನ್ನು ವಿದ್ಯಾರ್ಥಿಗಳ ಜತೆಗೆ ಹಂಚಿಕೊಳ್ಳುತ್ತಿರುತ್ತೇನೆ.

ನಾನು ಯಾವುದನ್ನಾದರೂ ಮರೆತಿದ್ದರೆ ನಿಮ್ಮ ಲೇಖನ ಅದನ್ನು ನೆನಪಿಸುತ್ತದೆ!, ಲೇಖನ ಸ್ವಾರಸ್ಯಕರವಾಗಿತ್ತು. ಅದಕ್ಕಿಂತಲೂ ಹೆಚ್ಚಾಗಿ, ಕೊನೆಯಲ್ಲಿ ಕೊಟ್ಟ ಗಣಿತದ ಸಮಸ್ಯೆ ತುಂಬಾ ಆಸಕ್ತಿದಾಯಕವಾಗಿತ್ತು. ಹಿಂದೊಮ್ಮೆ ಕೊಟ್ಟ ಮಾರ್ವಾಡಿ ಮಾತ್ರೆಗಳ ಸಮಸ್ಯೆಯಂತಿತ್ತು ಎಂದು ಮುಂತಾಗಿ ಬರೆದರು.

ಅಷ್ಟೇ ಅಲ್ಲ, ಸಮಂಜಸ ವಿವರಣೆಯೊಡನೆ ಲೆಕ್ಕದ ಸರಿ ಲೆಕ್ಕ(ಉತ್ತರ)ವನ್ನೂ ಒಪ್ಪಿಸಿದರು. ಇನ್ನು ಕೆಲವರು- ಪೆಟ್ಟಿಗೆಗಳ ತೂಕದಿಂದ ಕಂಡುಕೊಳ್ಳಬಹುದೇ? ಹೊರಸೂಸುವ ಪರಿಮಳದಿಂದ ತಿಳಿಯಬಹುದೇ? ಎಂದು ಪೆಟ್ಟಿಗೆಯಿಂದ ಹೊರಗೆ ಆಲೋಚಿಸಿ ಪ್ರಯತ್ನಪಟ್ಟವರೂ ಇದ್ದರು. ಅಂತೂ ಲೆಕ್ಕದಲ್ಲಿ ಆಸಕ್ತಿ ತೋರಿದರು ಎನ್ನುವುದು ಮುಖ್ಯ.

ತಾತ್ಪರ್ಯ ಇಷ್ಟೇ. ಗಣಿತವನ್ನು ನಖಶಿಖಾಂತ ದ್ವೇಷಿಸುವವರು ಇರುತ್ತಾರೆ. ಅಷ್ಟೇ ಪ್ರಮಾಣದಲ್ಲಿ ಗಣಿತವನ್ನು ಪ್ರೀತಿಸುವವರೂ ಇರುತ್ತಾರೆ. ಅಂದಹಾಗೆ ಕಿತ್ತಳೆ/ಸೇಬು ಪೆಟ್ಟಿಗೆಗಳ ಆ ಜಾಣ್ಮೆ ಲೆಕ್ಕ ತುಂಬ ಪ್ರಸಿದ್ಧವಾದುದು. ಕಾರ್ಪೊರೇಟ್ ಜಗತ್ತಿನಲ್ಲಿ ಎಂಟ್ರಿ ಲೆವೆಲ್ ಇಂಟರ್‌ವ್ಯೂಗಳಲ್ಲಿ ಅಭ್ಯರ್ಥಿಯ ಒಟ್ಟಾರೆ ಜಾಣ್ಮೆಯನ್ನು ಅಳೆಯಲು ಕೇಳುವ ಸಾಮಾನ್ಯಜ್ಞಾನ ಪ್ರಶ್ನೆಗಳಲ್ಲಿ ಆ ಲೆಕ್ಕವೂ ಒಂದು. ಬಿಡಿಸಲಿಕ್ಕೂ ಕಷ್ಟದ್ದೇನಲ್ಲ.

ಸೂತ್ರಗಳು ಭಿನ್ನರಾಶಿಗಳು ಗುಣಾಕಾರ ಭಾಗಾಕಾರಗಳೆಲ್ಲ ಏನೂ ಅವಶ್ಯವಿಲ್ಲ. ಮೂರು ಪೆಟ್ಟಿಗೆಗಳ ಮೇಲೆ ಅಂಟಿಸಿರುವ ಲೇಬಲ್‌ಗಳು ಅನುಕ್ರಮವಾಗಿ ಕಿ, ಸೇ, ಮತ್ತು ಕಿಸೇ ಅಂತಿಟ್ಟುಕೊಳ್ಳಿ. ಲೇಬಲ್‌ಗಳನ್ನು ತಪ್ಪಾಗಿ ಅಂಟಿಸಲಾಗಿದೆ ಎಂಬ ದತ್ತಾಂಶ ಇತ್ತಷ್ಟೆ? ನಿಜವಾಗಿಯಾದರೆ ಉತ್ತರ ಕಂಡುಕೊಳ್ಳಲಿಕ್ಕೆ ನೆರವಾಗುವ ಅಂಶ ಅದೇ! ರಂಗಣ್ಣನ ಮಗ ಕಿಸೇ ಲೇಬಲ್‌ನ ಪೆಟ್ಟಿಗೆಯಿಂದ ಒಂದು ಹಣ್ಣನ್ನು ತೆಗೆದುನೋಡಬೇಕು.

ಅದೊಂದು ವೇಳೆ ಕಿತ್ತಳೆ ಆಗಿದ್ದರೆ, ಆ ಪೆಟ್ಟಿಗೆಯಲ್ಲಿ ಕಿತ್ತಳೆ ಹಣ್ಣುಗಳು ಮಾತ್ರ ಇರುವುದೆಂದಾಯ್ತು. ಏಕೆಂದರೆ ಕಿಸೇ ಎಂಬ ಲೇಬಲ್ ತಪ್ಪಾಗಿ ಅಂಟಿಸಿರುವುದು ತಾನೆ? ಈಗ ಉಳಿದೆರಡು ಪೆಟ್ಟಿಗೆಗಳ ಪೈಕಿ ಸೇ ಎಂದು ಬರೆದಿರುವುದರಲ್ಲಿ ಸೇಬು ಮಾತ್ರ ಇರಲಿಕ್ಕೆ ಸಾಧ್ಯವಿಲ್ಲ (ಲೇಬಲ್ ತಪ್ಪಾದ್ದರಿಂದ), ಕಿತ್ತಳೆ ಮಾತ್ರವೂ ಇರಲಿಕ್ಕೆ ಸಾಧ್ಯವಿಲ್ಲ (ಕಿತ್ತಳೆ ಮಾತ್ರ ಇರುವ ಪೆಟ್ಟಿಗೆ ಯಾವುದೆಂದು ಈಗಾಗಲೇ ತಿಳಿದಿರುವುದರಿಂದ).

ಹಾಗಾಗಿ ಆ ಪೆಟ್ಟಿಗೆಯಲ್ಲಿ ಸೇಬು ಮತ್ತು ಕಿತ್ತಳೆ ಹಣ್ಣುಗಳಿವೆ. ಇನ್ನುಳಿದ ಪೆಟ್ಟಿಗೆಯಲ್ಲಿ ಕಿ ಎಂದು ಲೇಬಲ್ ಇದ್ದರೂ ಸೇಬು ಹಣ್ಣುಗಳು ಮಾತ್ರ ಇವೆ. ಇದು ಒಂದು ಸಾಧ್ಯತೆ. ಹಾಗಲ್ಲದೆ ಮೊದಲಿಗೆ ಕಿಸೇ ಪೆಟ್ಟಿಗೆಯಿಂದ ತೆಗೆದ ಹಣ್ಣು ಸೇಬು ಆಗಿದ್ದರೆ ಆ ಪೆಟ್ಟಿಗೆಯಲ್ಲಿ ಸೇಬು ಮಾತ್ರ ಇದೆಯೆಂದು ಸಾಬೀತಾಯ್ತು. ಉಳಿದೆರಡರ ಪೈಕಿ ಕಿ ಎಂದು ಬರೆದಿರುವುದರಲ್ಲಿ ಸೇಬು ಮತ್ತು ಕಿತ್ತಳೆ ಎರಡೂ ಇವೆ; ಸೇ ಎಂದು ಬರೆದಿರುವುದರಲ್ಲಿ ಕಿತ್ತಳೆ ಹಣ್ಣುಗಳಿವೆ.

ಚೆನ್ನಾಗಿದೆ ಅಲ್ವಾ ಈ ಲೆಕ್ಕ? ಲೆಕ್ಕಿಗಮಿತಾಕ್ಷರರು ಬೆಳೆದು ಮೆರೆದಿಹ ನಾಡು... ಎಂದಿದ್ದಾರೆ ಹುಯಿಲಗೋಳ ನಾರಾಯಣರಾಯರು, ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು ಕವಿತೆಯಲ್ಲಿ. ಅವರು ಲೆಕ್ಕಿಗ ಎಂದಿದ್ದು ಪ್ರಸಿದ್ಧ ಗಣಿತಶಾಸಜ್ಞ, ಈಗಿನ ವಿಜಯಪುರ ಜಿಲ್ಲೆಯ ಬಿಜ್ಜಡಬೀಡ ಎಂಬಲ್ಲಿ ಹುಟ್ಟಿ ಬೆಳೆದ, ಭಾಸ್ಕರಾಚಾರ್ಯರನ್ನು.

ಮಿತಾಕ್ಷರ ಎಂದಿದ್ದು ಪ್ರಸಿದ್ಧ ಕಾನೂನು ಕೃತಿ ಮಿತಾಕ್ಷರ ಗ್ರಂಥ ಬರೆದ, ಈಗಿನ ಕಲ್ಬುರ್ಗಿ ಜಿಲ್ಲೆಯ ಮರತೂರು ಎಂಬಲ್ಲಿ ಹುಟ್ಟಿ ಬೆಳೆದ ವಿಜ್ಞಾನೇಶ್ವರರನ್ನು. ನಾವೆಲ್ಲ ಅಭಿಮಾನ ಪಡಬೇಕಾದ ಸಂಗತಿಯಿದು. ಭಾಸ್ಕರಾಚಾರ್ಯರಂಥ ಲೆಕ್ಕಿಗರನ್ನು ಕೊಟ್ಟ ನಾಡು ನಮ್ಮದೆಂದ ಮೇಲೆ ನಾವೇಕೆ ಲೆಕ್ಕವೆಂದರೆ ಮೂಗು ಮುರಿಯಬೇಕು? ಲೆಕ್ಕಗಳನ್ನು ಕಲಿಯುವುದಕ್ಕೂ ಕಲಿಸುವುದಕ್ಕೂ ಪ್ರಸ್ತುತಪಡಿಸುವುದಕ್ಕೂ ಭಾಸ್ಕರಾಚಾರ್ಯರೇ ಮಾದರಿ ಎಂದು ಸೋದಾಹರಣವಾಗಿ ಬಣ್ಣಿಸಿದ್ದಾರೆ ಬೆಳಗೆರೆ ಸೀತಾರಾಮ ಶಾಸ್ತ್ರಿಗಳು, ಭಾಸ್ಕರಾಚಾರ್ಯರ ಲೀಲಾವತೀ ಗಣಿತ ಗ್ರಂಥದ ಬಗೆಗೆ ಬರೆದ ಪುಸ್ತಕದಲ್ಲಿ.

ಸಾಹಿತ್ಯವು ಸಕ್ಕರೆ ಇದ್ದ ಹಾಗೆ. ಸಾಮಾನ್ಯವಾಗಿ ಜನರಿಗೆ ಸಾಹಿತ್ಯದ ಗೀಳು ಇರುತ್ತದೆ. ಸಕ್ಕರೆಯೆಂದರೆ ಯಾರಿಗೆ ಅಕ್ಕರೆಯಿಲ್ಲ? ಆದರೂ ಬರೀ ಸಕ್ಕರೆಯನ್ನೇ ತಿನ್ನಬಾರದು. ಸರಿಯಾದ ದೇಹಸ್ಥಿತಿಗೆ ಸಕ್ಕರೆಯ ಜತೆಗೆ ಉಪ್ಪನ್ನೂ ಹುಳಿಯನ್ನೂ ಕಹಿಯಾದ ಕ್ವಿನೀನನ್ನೂ ಸೇವಿಸಬೇಕಾದ ಆವಶ್ಯಕತೆ ಇರುವಂತೆ ಸಂಸ್ಕಾರಕ್ಕೆ ಸಾಹಿತ್ಯದ ಜತೆಗೆ ಗಣಿತ-ವಿಜ್ಞಾನಗಳ ವ್ಯವಸಾಯವೂ ಬೇಕು.

ಕ್ವಿನೀನಿಗೆ ಸಕ್ಕರೆಯನ್ನು ಸವರುವಂತೆ ಭಾಸ್ಕರಾಚಾರ್ಯರು ಗಣಿತಕ್ಕೆ ಸಾಹಿತ್ಯದ ಮೇಲ್ಮುಸುಕನ್ನು ಹೊದೆಸಿದರು. ಸಕ್ಕರೆಯ ಮೇಲ್ಮುಸುಕು ಕರಗುವ ವೇಳೆಗೆ ಗುಳಿಗೆ ಮುಂದುವರಿದು ಅದರೊಳಗಿರುವ ವಸ್ತುವು ಬುದ್ಧಿಗೆ ಅಂಟುವುದಕ್ಕೆ ಮಾರ್ಗ ಸುಗಮವಾಗುತ್ತದೆ. ಅಧಿಕಾರಿಗಳನ್ನು ನೋಡುವುದಕ್ಕೆ ಹೋದಾಗ ದ್ವಾರಪಾಲಕರನ್ನು ಸಂತೋಷಗೊಳಿಸುವುದು ಒಳ್ಳೆಯದಷ್ಟೆ? ಎಂದು ಸೀತಾರಾಮ ಶಾಸ್ತ್ರಿಗಳು ಬರೆದಿರುವುದು ಸಾರ್ವಕಾಲಿಕ ಸತ್ಯ.

ರೇಖಾಗಣಿತದಲ್ಲಿ ಒಂದು ತ್ರಿಕೋನದ ಮುಖ್ಯ ಗುಣವನ್ನು ಪ್ರಸ್ತಾವಿಸುತ್ತ ಭಾಸ್ಕರರು ಸಾಹಿತ್ಯವನ್ನು ಹೇಗೆ ಬಳಸಿಕೊಂಡಿದ್ದಾರೆ ನೋಡಿ: ಚಕ್ರಕ್ರೌಂಚಾಕುಲಿತ ಸಲಿಲೇ ಕ್ವಾಪಿ ದೃಷ್ಟಂ ತಡಾಗೇ ತೋಯಾದೂರ್ಧ್ವಂ ಕಮಲಕಲಿಕಾಗ್ರಂ ವಿತಸ್ತಿ ಪ್ರಮಾಣಂ ಮಂದಂ ಮಂದಂ ಚಲಿತಮನಿಲೇನಾಹತಂ ಹಸ್ತಯುಗ್ಮಂ ತಸ್ಮಿನ್ಮಗ್ನಂ ಗಣಕ ಕಥಯ ಕ್ಷಿಪ್ರಮಂಭಃ ಪ್ರಮಾಣಂ – ಚಕ್ರಕ್ರೌಂಚ ಪಕ್ಷಿಗಳಿಂದಲೂ ಕಮಲಗಳಿಂದಲೂ ಆವೃತವಾದ ಒಂದು ತಟಾಕವನ್ನು ನಮ್ಮ ಕಣ್ಣೆದುರಿಗೆ ನಿಲ್ಲಿಸಿದರು.

ಅದರಲ್ಲಿ ನೀರಿನ ಮಟ್ಟದಿಂದ ಮೇಲಕ್ಕೆದ್ದಿರುವ ಒಂದು ಕಮಲ ಕಲಿಕಾಗ್ರವನ್ನು ಚಿತ್ರಿಸಿದರು. ಮಂದಮಾರುತವನ್ನು ಕರೆತಂದರು. ಅದರಿಂದ ಕಮಲದ ದಂಟು ಬಾಗಿ ಸ್ವಲ್ಪ ದೂರದಲ್ಲಿ ಅದರ ತುದಿ ಮುಳುಗಿಕೊಂಡುದನ್ನು ತೋರಿಸಿದರು. ಈ ದೂರವನ್ನೂ ನೀರಿನ ಮಟ್ಟದ ಮೇಲಿನ ದಂಟಿನ ಅಳತೆಯನ್ನೂ ಕೊಟ್ಟು ನೀರಿನ ಆಳವನ್ನು ಕ್ಷಿಪ್ರವಾಗಿ ಹೇಳೆಂದರು.

ಆ ಕೆರೆಯ ಬಳಿ, ಆ ಮನಮೋಹಕ ವಾತಾವರಣದಲ್ಲಿ ಕುಳಿತು ಉತ್ತರವನ್ನು ಯೋಚಿಸುವುದಕ್ಕೆ ಯಾರಿಗೆ ತಾನೆ ಮನಸ್ಸು ಬರುವುದಿಲ್ಲ? ಬದಲಿಗೆ, ಒಂದು ಲಘುಕೋನ ತ್ರಿಕೋನದ ಈ ಅಳತೆ ಇಷ್ಟು, ಆ ಅಳತೆ ಅಷ್ಟು, ಇನ್ನೊಂದಳತೆ ಎಷ್ಟು? ಎಂದು ಪ್ರಶ್ನಿಸಿದ್ದರೆ ಸ್ವಾಮೀ, ನಿಮ್ಮ ಲಘುಕೋನವೂ ಬೇಡ ತ್ರಿಕೋನವೂ ಬೇಡ, ನಮಸ್ಕಾರ ಎಂದು ಹೇಳಿ ವಿದ್ಯಾರ್ಥಿಯು ಎದ್ದು ಹೋಗುವನಲ್ಲದೆ ಮತ್ತೆಂದಿಗೂ ರೇಖಾಗಣಿತದ ಸುದ್ದಿಗೇ ಬರಲಾರ.

ರೇಖಾಗಣಿತದಂತೆಯೇ ಬೀಜಗಣಿತವನ್ನೂ ಭಾಸ್ಕರಾಚಾರ್ಯರು ಮೋಹಕಗೊಳಿಸಿದ್ದಾರೆ. ವರ್ಷಾಕಾಲವು ಪ್ರಾಪ್ತವಾದಾಗ ಒಂದು ಹಂಸ ಸಮೂಹದಲ್ಲಿ ವರ್ಗಮೂಲದ ಹತ್ತರಷ್ಟು ಹಂಸಗಳು ಮಾನಸಸರೋವರಕ್ಕೆ ತೆರಳಿದವು. ಎಂಟನೆಯ ಒಂದು ಭಾಗವು ಸ್ಥಲಪದ್ಮಿನೀ ವನಕ್ಕೆ ಹೋಯಿತು. ಉಳಿದ ಮೂರು ಜೋಡಿ ಹಂಸಗಳು ಜಲಕೇಲಿಯಲ್ಲಿ ತೊಡಗಿದವು.

ಹಾಗಿದ್ದರೆ ಆ ಸಮೂಹದಲ್ಲಿ ಮೊದಲಿಗೆ ಒಟ್ಟು ಎಷ್ಟು ಹಂಸಗಳು ಇದ್ದವು? ಎಂಬ ಪ್ರಶ್ನೆಗೆ ಚಂದದ ಶಾರ್ದೂಲವಿಕ್ರೀಡಿತ ವೃತ್ತದಲ್ಲೊಂದು ಪದ್ಯ: ಯಾತಂ ಹಂಸಕುಲಸ್ಯ ಮೂಲದಶಕಂ ಮೇಘಾಗಮೇ ಮಾನಸಂ ಪ್ರೋಡ್ಡೀಯ ಸ್ಥಲಪದ್ಮಿನೀವನವಂಗಾದಷ್ಟಾಂಶಕೋಂಭಸ್ತಟಾತ್ ಬಾಲೇ ಬಾಲಮೃಣಾಲಶಾಲಿನಿ ಜಲೇ ಕೇಲಿಕ್ರಿಯಾಲಾಲಸಂ ದೃಷ್ಟಂ ಹಂಸಯುಗತ್ರಯಂ ಚ ಸಕಲಾಂ ಯೂಥಸ್ಯ ಸಂಖ್ಯಾಂ ವದ ಉತ್ತರ: 144. ಪ್ರಕೃತಿಯ ಸೊಬಗೊಂದೇ ಅಲ್ಲ ಪುರಾಣ ಕಥೆಗಳನ್ನೂ ಗಣಿತ ಕಲಿಕೆಗೆ ಬಳಸಿದ್ದಾರೆ: ಪಾರ್ಥಃ ಕರ್ಣವಧಾಯ ಮಾರ್ಗಣಗಣಂ ಕ್ರುದ್ಧೋ ರಣೇ ಸಂದಧೇ ತಸ್ಯಾರ್ಧೇನ ನಿವಾರ್ಯ ತಚ್ಛರಗಣಂ ಮೂಲೈಶ್ಚತುರ್ಭಿರ್ಹಯಾನ್ ಶಲ್ಯಂ ಷಡ್ಭಿರಥೇಷುಭಿಸಿಭಿರಪಿಚ್ಛತ್ರಂ ಧ್ವಜಂ ಕಾರ್ಮುಕಂ ಚಿಚ್ಛೇದಾಸ್ಯ ಶಿರಃ ಶರೇಣ ಕತಿ ತೇ ಯಾನರ್ಜುನಃ ಸಂದಧೇ ಅಂದರೆ, ಪಾರ್ಥನು ರಣರಂಗದಲ್ಲಿ ಕುಪಿತನಾಗಿ ಕರ್ಣವಧೆಗಾಗಿ ನಿಂತನು.

ಬತ್ತಳಿಕೆಯಲ್ಲಿದ್ದ ಬಾಣಗಳಲ್ಲಿ ಅರ್ಧದಷ್ಟನ್ನು ಕರ್ಣನ ಬಾಣಗಳನ್ನು ನಿರ್ನಾಮಗೊಳಿಸಲಿಕ್ಕೆ ಬಳಸಿದನು. ವರ್ಗಮೂಲದ ನಾಲ್ಕರಷ್ಟು ಬಾಣಗಳಿಂದ ಶತ್ರುಗಳ ಕುದುರೆಗಳನ್ನು ಕೊಂದನು. ಶಲ್ಯನನ್ನು ಸಾಯಿಸಲಿಕ್ಕೆ ಆರು ಬಾಣಗಳು ಹೋದುವು. ಮತ್ತೆ ಮೂರರಿಂದ ಕರ್ಣನ ಬಿಲ್ಲು, ರಥದ ಛತ್ರ ಮತ್ತು ಧ್ವಜವನ್ನು ಮುರಿದನು. ಉಳಿದೊಂದು ಬಾಣವು ಕರ್ಣನ ಶಿರಚ್ಛೇದನ ಮಾಡಿತು.

ಹಾಗಾದರೆ ಬತ್ತಳಿಕೆಯಲ್ಲಿ ಮೊದಲಿದ್ದ ಒಟ್ಟು ಬಾಣಗಳೆಷ್ಟು? ಉತ್ತರ: 100. ಮಹಾಭಾರತವನ್ನು ಆಧಾರವಾಗಿ ತಿರುವಿಹಾಕಿ, ಅರ್ಜುನನು ನೂರು ಬಾಣಗಳನ್ನಷ್ಟೇ ತೆಗೆದುಕೊಂಡು ಹೋಗಿದ್ದಲ್ಲವೆಂದೂ, ಈ ಸಂಖ್ಯೆಗಳಾವುವೂ ವ್ಯಾಸಭಾರತದಲ್ಲಿ ಉಕ್ತವಾಗಿಲ್ಲವೆಂದೂ, ಕಾಳಗದ ಕ್ರಮ ಬೇರೆ ಇದ್ದಿತೆಂದೂ ಯಾರಾದರೂ ಸಾಧಿಸಿದರೂ ಪ್ರಶ್ನೆಯ ಗಣಿತಭಾಗಕ್ಕೆ ತೊಂದರೆಯೇನಿಲ್ಲ.

ಕರ್ಣಾರ್ಜುನರ ಕಾಳಗದ ಆ ಚಿತ್ರ- ಬಾಣಗಳ ಹಾರಾಟ, ಸೈನ್ಯದ ನಾಶ, ಚೀತ್ಕಾರ, ಛತ್ರಧ್ವಜ ಕಾರ್ಮುಕಗಳ ಪತನ, ಕರ್ಣನ ಶಿರಚ್ಛೇದನ- ಆ ದೃಶ್ಯ ಕಣ್ಣಿಗೆ ಕಟ್ಟಿದಂತೆ ನಿಂತು ಬುದ್ಧಿಯ ಶ್ರಮವನ್ನು ಪರಿಹರಿಸುತ್ತದೆ. ಗಣಿತ ಸುಲಭವಾಗಿ ತಲೆಯೊಳಕ್ಕೆ ಹೋಗುತ್ತದೆ. ಲೀಲಾವತೀ ಗ್ರಂಥವು ನಮ್ಮನ್ನು ಒಂದು ಮನಮೋಹಕ ನೂತನ ಪ್ರಪಂಚಕ್ಕೆ ಕೊಂಡೊಯ್ಯುತ್ತದೆ. ಹೂವಿನ ತೋಟಗಳಲ್ಲಿ ಝೇಂಕರಿಸುತ್ತ ಹಾರಾಡುವ ಭೃಂಗಸಮೂಹಗಳು, ನಲಿದು ನರ್ತಿಸುವ ನವಿಲುಗಳು, ಮರಗಳಿಂದ ಇಳಿದುಬರುತ್ತಿರುವ, ಮರಗಳ ಮೇಲಿಂದ ಹಾರುತ್ತಿರುವ ಕಪಿಗಳು, ವಿವಿಧ ಲೀಲೆಯಲ್ಲಿರುವ ಆನೆಗಳ ಗುಂಪುಗಳು, ಚಕ್ರಕ್ರೌಂಚಾಕುಲಿತವಾದ ಸರೋವರಗಳು, ಸ್ಥಲಪದ್ಮಿನೀ ವನಗಳು, ಜಲಕೇಲಿ ಕಲಹದಲ್ಲಿರುವ ಅಥವಾ ವರ್ಷಾಕಾಲದಲ್ಲಿ ಮಾನಸಾಭಿಮುಖವಾಗುವ ಕಲಹಂಸಗಳು, ರಾಜಮಾರ್ಗಗಳು, ತೀರ್ಥಯಾತ್ರಿಕರು, ಶತ್ರು ನಗರಗಾಮಿ ರಾಜಸೈನ್ಯಗಳು, ಯುದ್ಧ ಭೂಮಿಗಳು, ಮಾಣಿಕ್ಯ ಇಂದ್ರನೀಲ ಮುಕ್ತ-ಲಾದಿ ರತ್ನವ್ಯಾಪಾರಿಗಳು, ಕವಿಗಳು, ದೇವಪೂಜಾಧುರಂಧರರು, ತ್ಯಾಗಿಗಳು, ನಂದಾದೀಪಗಳು, ಕರ್ಪೂರಾದಿ ಪರಿಮಳದ್ರವ್ಯಗಳು... ಕೊನೆಗೆ ದೇವರ ದರ್ಶನವೂ ಆಗುತ್ತದೆ: ಪಾಶಾಂಕುಶಾಹಿ ಡಮರೂಹ ಕಪಾಲ ಶೂಲೈಃ ಖಟ್ವಾಂಗ ಶಕ್ತಿ ಶರಚಾಪಯುತೈರ್ಭವಂತಿ ಅನ್ಯೋನ್ಯ ಹಸ್ತಕಲಿತೈಃ ಕತಿ ಮೂರ್ತಿಭೇದಾಃ ಶಂಭೋರ್ಹರೇರಿವ ಗದಾರಿ ಸರೋಜ ಶಂಖೈಃ ಪಾಶ, ಅಂಕುಶ, ಸರ್ಪ, ಡಮರುಗ, ಕಪಾಲ, ತ್ರಿಶೂಲ, ಮಂಚದ ಕಾಲು, ಕತ್ತಿ, ಬಾಣ, ಧನುಸ್ಸು ಈ 10 ಭೂಷಣಗಳನ್ನು 10 ಕೈಗಳಲ್ಲಿ ಬೇರೆಬೇರೆ ಕ್ರಮಗಳಲ್ಲಿಟ್ಟು ಶಂಭುವಿನ ಮೂರ್ತಿಗಳನ್ನು ಮಾಡಿದರೆ ಎಷ್ಟು ಮೂರ್ತಿಗಳಾಗುತ್ತವೆ? ಹಾಗೆಯೇ ಶಂಖ-ಚಕ್ರ-ಗದಾ-ಪದ್ಮ ನಾಲ್ಕು ಭೂಷಣಗಳುಳ್ಳ ಹರಿಯ ಮೂರ್ತಿಗಳೆಷ್ಟಾಗುತ್ತವೆ? ಶಂಭುವಿನಲ್ಲಿ ಸಂಪೂರ್ಣ ಭಕ್ತಿಯಿರುವ ಶಿಲ್ಪಿಯು 36,28,800 (ಇದು 10ರ ಅಪವರ್ತನೀಯ) ಬೇರೆಬೇರೆ ವಿಗ್ರಹಗಳನ್ನು ಕೆತ್ತಿಟ್ಟು ಕೃತಾರ್ಥನಾಗಬಹುದು.

ವಿಷ್ಣುಭಕ್ತನಿಗೆ ಅಷ್ಟು ಶ್ರಮವಿಲ್ಲ. 24 (ಇದು 4ರ ಅಪವರ್ತನೀಯ) ವಿಗ್ರಹಗಳಾದರೆ ಸಾಕು. ವಿಷ್ಣುವಿಗಾದರೂ ಕೇಶವಾದಿ 24 ಹೆಸರುಗಳಿವೆ, ಒಂದೊಂದು ವಿಗ್ರಹಕ್ಕೆ ಒಂದೊಂದು ಹೆಸರಿಡ ಬಹುದು. ಆದರೆ ಶಂಭುವಿಗ್ರಹಗಳನ್ನು ಅಷ್ಟು ಸಂಖ್ಯೆಯಲ್ಲಿ ಕೆತ್ತಿಸಿದಂತೆಯೂ ಇಲ್ಲ, ಹೆಸರುಗಳನ್ನು ಜೋಡಿಸಿದಂತೆಯೂ ಕಾಣುವುದಿಲ್ಲ!

ಇಲ್ಲಿ ರಷ್ಯನ್ ಗಣಿತಜ್ಞ ಯಾಕೊವ್ ಪೆರೆಲ್ಮನ್‌ನ ಪುಸ್ತಕಗಳು, ಮೋಜಿನ ಗಣಿತ ಮತ್ತು ಮನರಂಜನೆಗಾಗಿ ಬೀಜಗಣಿತ ಎಂದು ಅಡ್ಡೂರು ಕೃಷ್ಣ ರಾವ್ ಕನ್ನಡಕ್ಕೆ ಅನುವಾದಿಸಿರುವಂಥವು ಕೂಡ ಉಲ್ಲೇಖಾರ್ಹ. ಮೇಲಿನ ಶಂಭುಮೂರ್ತಿಗಳ ಸಂಖ್ಯೆಯ ಲೆಕ್ಕವನ್ನೇ ಪೆರೆಲ್ಮನ್ ಇನ್ನೊಂದು ರೀತಿಯಲ್ಲಿ ಮಂಡಿಸುತ್ತಾನೆ: ಕಾಲೇಜಿಂದ ಉತ್ತೀರ್ಣರಾದುದನ್ನು ಒಂದು ಹೊಟೇಲಲ್ಲಿ ರಾತ್ರಿಯೂಟ ಸವಿಯುವ ಮೂಲಕ ಆಚರಿಸಲು ಹತ್ತು ಯುವಕರು ನಿರ್ಧರಿಸಿದರು.

ಅವರು ಅಲ್ಲಿ ಹತ್ತು ಕುರ್ಚಿಗಳ ಮೇಲೆ ಯಾವ ಕ್ರಮದಲ್ಲಿ- ಹೆಸರುಗಳ ಅಕಾರಾದಿಯಲ್ಲೋ ವಯಸ್ಸಿನಾಧಾರದಲ್ಲೋ ಎತ್ತರಪ್ರಕಾರವೋ- ಕೂರಬೇಕೆಂದು ಚರ್ಚೆಯಾಯ್ತು. ಹೊಟೇಲಿನ ಮಾಣಿಯೇ ಒಂದು ಸಲಹೆಯಿತ್ತನು. ನೀವೀಗ ಯಾವ ಕ್ರಮದಲ್ಲಿ ಕೂತಿದ್ದೀರೆಂದು ನಿಮ್ಮಲ್ಲೊಬ್ಬರು ಬರೆದುಕೊಳ್ಳಲಿ.

ನಾಳೆ ಇಲ್ಲಿಗೆ ಮರಳಿಬಂದು ಬೇರೊಂದು ಕ್ರಮದಲ್ಲಿ ಕುಳಿತುಕೊಳ್ಳಿ. ನಾಡಿದ್ದು ಮತ್ತೊಂದು ಕ್ರಮದಲ್ಲಿ. ಹಾಗೆ ಎಷ್ಟೆಲ್ಲ ಕ್ರಮಗಳಲ್ಲಿ ಕೂರಬಹುದೋ ಪ್ರತಿದಿನ ಮಾಡಿ. ಕೊನೆಗೆ, ಈಗ ಕೂತಿರುವಂತೆಯೇ ನೀವೆಲ್ಲ ಕೂರುವ ದಿನ ಬಂದಾಗ, ನೀವು ಇಷ್ಟಪಡುವ ರಸಭಕ್ಷ್ಯಗಳನ್ನು ನಿಮಗೆ ಪುಕ್ಕಟೆಯಾಗಿ ಬಡಿಸುತ್ತೇವೆ. ಸಲಹೆಯೇನೋ ಆಸೆ ಹುಟ್ಟಿಸುವಂತಿತ್ತು. ಯುವಕರು ಒಂದಿಷ್ಟು ದಿನ ಕ್ರಮ ಬದಲಾಯಿಸಿದರು ಕೂಡ. ಆದರೆ ಪುಕ್ಕಟೆ ಭೋಜನದ ದಿನ ಬರಲೇ ಇಲ್ಲ!

ಕಾರಣ? ಮಾಣಿ ತನ್ನ ಮಾತು ಉಳಿಸಿಕೊಳ್ಳದಿದ್ದದ್ದಲ್ಲ. ಹತ್ತು ಜನರು ಬೇರೆಬೇರೆ ಕ್ರಮಗಳಲ್ಲಿ ಕೂರಬಹುದಾದ ರೀತಿಗಳು ಅಷ್ಟಿಷ್ಟಲ್ಲ 36,28,800. ಅದಕ್ಕೆ ಸುಮಾರು 10000 ವರ್ಷಗಳೇ ಬೇಕು! ಆ ಪುಸ್ತಕಗಳಲ್ಲಿರುವ ಹಲವಾರು ಗಣಿತ ಸಮಸ್ಯೆಗಳ ಪೈಕಿ ವಿಶಿಷ್ಟವೆನಿಸಿದ್ದೊಂದು ಪ್ರಾಚೀನ ಕಾಲದ ಪ್ರಕಾಂಡ ಗಣಿತಜ್ಞ ಡಯೊಫಾಂಟಸ್‌ನ ಜೀವಿತಾವಧಿ ಲೆಕ್ಕ. ಅವನ ಸಮಾಧಿಶಿಲೆಯಲ್ಲಿ ಹೀಗೆ ಬರೆದಿದೆಯಂತೆ: ಪಯಣಿಗಾ, ಇಲ್ಲಿ ಡಯೊಫಾಂಟಸ್‌ನ ಅಸ್ಥಿಸಂಚಯನ ಇದೆ.


ಅವನ ಜೀವಿತಾವಧಿಯನ್ನು ಹೀಗೆ ಲೆಕ್ಕ ಮಾಡು. ಒಟ್ಟು ಅವಧಿಯ 1/6 ಭಾಗ ಸುಂದರ ಬಾಲ್ಯ. ಜೀವನದ 1/12 ಭಾಗ ದಾಟಿದಾಗ ಮದುವೆಯಾದ. ಜೀವಿತದ 1/7 ಅವಧಿಯನ್ನು ವಿವಾಹಿತನಾಗಿದ್ದರೂ ಮಕ್ಕಳಿಲ್ಲದೆ ಕಳೆದ. ಇದಾದ 5 ವರ್ಷಗಳ ಬಳಿಕ ಅವನಿಗೆ ಪುತ್ರೋತ್ಸವದ ಆನಂದ. ಆ ಪುತ್ರನಿಗೋ ತಂದೆಯ ಆಯುಷ್ಯದ ಅರ್ಧ ಅವಧಿಯ ಜೀವನವನ್ನು ಮಾತ್ರ ವಿಧಿ ನೀಡಿತು.

ದುಃಖತಪ್ತನಾದ ಈ ವೃದ್ಧ ಪುತ್ರವಿಯೋಗದ ನಾಲ್ಕು ವರ್ಷಗಳ ಬಳಿಕ ತನ್ನ ಕೊನೆಯುಸಿರೆಳೆದ. ಉತ್ತರವನ್ನು ಸಮಾಧಿಶಿಲೆಯ ಮೇಲೆ ಬರೆದಿಲ್ಲ, ಆದರೆ ಬೀಜಗಣಿತದ ಮೂಲಕ ಬಿಡಿಸಿದಾಗ 84 ವರ್ಷ ಎಂದು ತಿಳಿಯುತ್ತದೆ. ಒಬ್ಬ ಗಣಿತಜ್ಞ ತಾನು ಸತ್ತ ಮೇಲೂ ಗಣಿತವನ್ನು ಜೀವಂತವಾಗಿರಿಸಿದ ರೀತಿಯಿದು!


ಕೊನೆಯಲ್ಲಿ, ಈ ವಾರದ್ದು ತಿಳಿರುತೋರಣ ಅಂಕಣದ ಎಷ್ಟನೆಯ ಸಂಚಿಕೆ? ಎಂಬ ಪ್ರಶ್ನೆ. ಇದನ್ನೂ ಒಂದು ರಸಪ್ರಶ್ನೆಯಂತೆ, ಜಾಣ್ಮೆಲೆಕ್ಕದಂತೆ ಕೇಳುವುದಾದರೆ: ಪುಟಾಣಿ ಶಾಲ್ಮಲೀ ಎಂಬ ಮುದ್ದುಹುಡುಗಿಯು ಮುದ್ದಾಗಿ ಹಾಡಿ ಜನಪ್ರಿಯಗೊಳಿಸಿದ ಹಾಡಿನಲ್ಲಿ ರಂಗ ಏನು ಆಡ್ಯಾನೆ ಎಂಬುವುದರಿಂದ 1/2 ಭಾಗ. ಅಥವಾ, ಬ್ಯಾಂಕ್ ಮೂಲಕ ಯಾರಿಗಾದರೂ ದುಡ್ಡು ಕಳುಹಿಸುವುದಕ್ಕೆ ಡಿಮ್ಯಾಂಡ್ ಡ್ರಾಫ್ಟ್ ಪಡೀತಿದ್ವಲ್ಲಾ ಅದನ್ನು ಹ್ರಸ್ವ ರೂಪವಾಗಿ ಏನಂತಿದ್ವಿ ಎಂದು ನೆನಪಿಸಿಕೊಂಡು ಅದರ 1/2 ಭಾಗ. ಅಥವಾ, ಭಾರತದ ರಾಷ್ಟ್ರೀಯ ಟೆಲಿವಿಷನ್ ವಾಹಿನಿ ದೂರದರ್ಶನವನ್ನು ಹ್ರಸ್ವ ರೂಪವಾಗಿ ಏನಂತೀವಿ ಎಂದು ನೆನಪಿಸಿಕೊಂಡು ಅದರ 1/2 ಭಾಗ. ಅಥವಾ, ಅಪರಾಧಿಯಾಗಿ ಈಗ ಸೆರೆಮನೆಯಲ್ಲಿರುವ ಕನ್ನಡ ನಟನನ್ನು ಆತನ ಅಂಧಾಭಿಮಾನಿಗಳು – ಬಾಸ್ ಎನ್ನುತ್ತಾರಲ್ಲ ಅದನ್ನು ಪೂರ್ಣವಾಗಿ ತಗೊಳ್ಳಿ. ಅಥವಾ, ಸೂರ್ಯರಶ್ಮಿಯಲ್ಲಿ ನಮಗೆ ಸಿಗುವ ಜೀವಸತ್ವ ಯಾವುದೆಂದು ನೆನಪಿಸಿಕೊಂಡು ಅದನ್ನು ಪೂರ್ಣವಾಗಿ ತಗೊಳ್ಳಿ. ಅಥವಾ, ಮೂರು-ಆಯಾಮಗಳ ಸಿನಿಮಾವನ್ನು ತ್ರೀ- ಎನ್ನುತ್ತೇವಲ್ವಾ ಅದನ್ನು ತಗೊಳ್ಳಿ. ಅಥವಾ, ತಿಳಿರುತೋರಣದಲ್ಲಿ ಇದುವರೆಗೆ ಪ್ರತಿಯೊಂದು ಲೇಖನವೂ ಕನ್ನಡದ ನಿರ್ದಿಷ್ಟವಾದ ಒಂದೇ ಅಕ್ಷರದಿಂದ ಆರಂಭವಾಗಿದೆಯಲ್ವಾ ಅದರೊಡನೆ ಇಂಗ್ಲಿಷ್‌ನ ಯಾವ ಅಕ್ಷರ ಜೋಡಿಸಿದರೆ ಹೆಜ್ಜೆ ಎಂಬ ಅರ್ಥ ಬರುತ್ತದೋ ಅದನ್ನು ತಗೊಳ್ಳಿ.

ಹಾಂ! ಅದು ಇಂಗ್ಲಿಷ್ ವರ್ಣಮಾಲೆಯ ನಾಲ್ಕನೆಯ ಅಕ್ಷರ ತಾನೆ? ರೋಮನ್ ಸಂಖ್ಯಾ ಪದ್ಧತಿಯಲ್ಲಿ ಅದನ್ನು ಯಾವ ಸಂಖ್ಯೆಯ ಸಂಕೇತವಾಗಿ ಬಳಸುತ್ತಾರೆ? ಅಷ್ಟು ಸಂಚಿಕೆಗಳಾದುವು ಇಂದಿಗೆ ತಿಳಿರುತೋರಣ ಅಂಕಣದ್ದು! ಈ ಸಂದರ್ಭದಲ್ಲಿ ನಿಮ್ಮೆಲ್ಲರ ಪ್ರೀತಿವಿಶ್ವಾಸಕ್ಕೆ ವಿಶೇಷ ಧನ್ಯವಾದಗಳು. ಇದು ಹೀಗೆಯೇ ಮುಂದುವರಿಯಲಿ.

**– ಶ್ರೀವತ್ಸ ಜೋಶಿ**



## ಮೊನಾರ್ಕ್ ಚಿಟ್ಟೆಗಳ ಖಂಡಾಂತರ ವಲಸೆ



ಚಿಟ್ಟೆಗಳ ಹೋಗಿ-ಬರುವ ವಲಸೆಗೆ ಪ್ರಕೃತಿಯಲ್ಲಿ ಒಂದೇ ಒಂದು ಉದಾಹರಣೆ ಮೊನಾರ್ಕ್ ಚಿಟ್ಟೆಗಳ ಖಂಡಾಂತರ ವಲಸೆ. ಚಳಿಗಾಲದ ತಿಂಗಳುಗಳಲ್ಲಿ, ಚಳಿಯಿಂದ ಪಾರಾಗಲಿಕ್ಕಾಗಿ ಉತ್ತರ ಅಮೇರಿಕಾದಿಂದ ದಕ್ಷಿಣ ದಿಕ್ಕಿಗೆ ಲಕ್ಷಗಟ್ಟಲೆ ಮೊನಾರ್ಕ್ ಚಿಟ್ಟೆಗಳು ವಲಸೆ ಹೋಗುತ್ತವೆ. ತಮ್ಮ ಚಳಿಗಾಲದ ವಸತಿ ಸೇರಲು ಅವು ಎರಡು ತಿಂಗಳುಗಳ ಅವಧಿ ಹಾರುತ್ತವೆ. ಈ ಮಹಾನ್ ಪಯಣ ಒಂದು ಪ್ರಾಕೃತಿಕ ಅದ್ಭುತ!

ಉತ್ತರ ಅಮೇರಿಕಾದ ಪೂರ್ವ ಪ್ರದೇಶದಿಂದ ಮೊನಾರ್ಕ್ ಚಿಟ್ಟೆಗಳು ದಕ್ಷಿಣದ ಮೆಕ್ಸಿಕೋದ ಸಿಯೆರಾ ಮಾದ್ರೆ ಬೆಟ್ಟಗಳಿಗೆ ಹಾರುತ್ತಾ ಹೋಗುತ್ತವೆ. ಹಾಗೆಯೇ ಉತ್ತರ ಅಮೆರಿಕಾದ ಪಶ್ಚಿಮ ಪ್ರದೇಶದಿಂದ ಅವುಗಳ ಪ್ರಯಾಣ ದಕ್ಷಿಣದ ಕ್ಯಾಲಿಫೋರ್ನಿಯಾಕ್ಕೆ.

ಗಾಳಿಯ ಅಲೆಗಳ ಮೇಲೆ ಪಯಣಿಸುವ ಮೊನಾರ್ಕ್ ಚಿಟ್ಟೆಗಳು ಭೂಮಿಯ ಗುರುತ್ವಾಕರ್ಷಣ ಬಲದ ಸೆಳೆತ ಮತ್ತು ಸೂರ್ಯನ ಸ್ಥಾನದಿಂದ ದಿಕ್ಕಿನ ಮಾಹಿತಿ ಪಡೆಯುತ್ತವೆ ಎಂದು ತಿಳಿಯಲಾಗಿದೆ. ಅವು ಹಗಲಿನಲ್ಲಿ ಮಾತ್ರ ಹಾರುತ್ತಾ, ರಾತ್ರಿಯ ಹೊತ್ತಿನಲ್ಲಿ ಪೈನ್, ಸಿಡಾರ್ ಮತ್ತು ಫರ್ ಮರಗಳಲ್ಲಿ ವಿರಮಿಸುತ್ತವೆ. ವಿರಮಿಸುವಾಗ ತಮ್ಮನ್ನು ಬೆಚ್ಚಗೆ ಇರಿಸಿಕೊಳ್ಳಲಿಕ್ಕಾಗಿ ಅವು ಒಂದಕ್ಕೊಂದು ತಗಲಿಕೊಂಡು ಮರಗಳ ಕೊಂಬೆಗಳಿಂದ ನೇತಾಡುತ್ತವೆ ಮೊನಾರ್ಕ್ ಚಿಟ್ಟೆಗಳು ಕ್ರಮಿಸುವ ಅಂತರ ನಮ್ಮನ್ನು ದಂಗುಬಡಿಸುತ್ತದೆ. ಒಂದೇ ದಿನದಲ್ಲಿ ಅವು 160 ಕಿಮೀ (100 ಮೈಲು) ದೂರ ಹಾರುತ್ತವೆ. ಕೆಲವು ಚಿಟ್ಟೆಗಳಂತೂ ತಮ್ಮ ಗಮ್ಯ ತಲಪಲಿಕ್ಕಾಗಿ ಒಟ್ಟು 4,800 ಕಿಮೀ (3,000 ಮೈಲು) ಹಾರುತ್ತವೆ!

ಮೆಕ್ಸಿಕೋದ ಬೆಟ್ಟಗಳನ್ನು ತಲಪಿದಾಗ ಸಾವಿರಾರು ಮೊನಾರ್ಕ್ ಚಿಟ್ಟೆಗಳು ಒಯಾಮೆಲ್ ಫರ್ ಮರಗಳ ಕೊಂಬೆಗಳಲ್ಲಿ ಗುಂಪುಗುಂಪಾಗಿ ನೆಲೆಸುತ್ತವೆ. ಈ ಮರಗಳು ಚಿಟ್ಟೆಗಳನ್ನು ರಕ್ಷಿಸುತ್ತವೆ ಮತ್ತು ಮರಗಳ ಎಲೆಗಳ ಛಾವಣಿ ಅವನ್ನು ಬೆಚ್ಚಗಾಗಿ ಇರಿಸುತ್ತದೆ.

ಮೊನಾರ್ಕ್ ಚಿಟ್ಟೆಗಳು ಮಕರಂದದ ಆಹಾರ ಪಡೆಯುವುದು ಮಿಲ್ಕ್-ವೀಡ್ (ಹಾಲುಕಳೆ) ಸಸ್ಯಗಳಿಂದ. ಇವು ಮೊಟ್ಟೆ ಇಡುವುದು ಅದೇ ಮಿಲ್ಕ್-ವೀಡ್ ಸಸ್ಯಗಳಲ್ಲಿ ಮಾತ್ರ ಎಂಬುದೂ ವಿಶೇಷ. ಈ ಚಿಟ್ಟೆಗಳ ಕಂಬಳಿಹುಳಗಳ ಮುಖ್ಯ ಆಹಾರವೂ ಮಿಲ್ಕ್-ವೀಡ್ ಸಸ್ಯಗಳ ಎಲೆಗಳು.

## ಮಾವನ ಸಲುವಾಗಿ

**ಶ್ರೀಮತಿ:** ರೀ, ಪಕ್ಕದ್ಮನೆ ತಾರಾಳ ಗಂಡ ದಿನಾಲೂ ಸೂಟ್ ಕೇಸ್ ತುಂಬ ಲಂಚದ ಹಣ ತರ್ತಾರೆ. ನೀವೂ ಇದೀರಾ, ಒಂದು ದಿನಾನೂ ನಯಾ ಪೈಸೆ ತರಲ್ಲ.

**ಸೂರಿ:** ಅವನು ಮಾವನ ಸಲುವಾಗಿ ದುಡ್ಡು ಕೂಡಿಸ್ತಿದಾನೆ ಕಣೇ.

**ಶ್ರೀಮತಿ:** ಅವರ ಮಾವ ಯಾರು?

**ಸೂರಿ:** ಲೋಕಾಯುಕ್ತದವರು. ಹೀಗೆ ಸೂಟ್‌ಕೇಸ್ ಮೇಲೆ ಸೂಟ್ ಕೇಸ್ ತಂದ್ರೆ ಅದನ್ನು ಎತ್ಕೊಂಡು ಹೋಗೋಕೆ ಬರ್ತಾರೆ!



